ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವ್ಯಕ್ತ ಮಾಡಿ. ಇನ್ನು ಎರಡು ದಿವಸ ಇದೆ. ವ್ಯಕ್ತ ಮಾಡಿ.

ಉಪಾಧ್ಯಕ್ಷರು: ಇನ್ನೂ ಸಮಯ ಇದೆ. ಮಾನ್ಯ ಶ್ರೀರಾಮರೆಡ್ಡಿಯವರದ್ದು ಮುಗಿಯಲಿ. ಆಮೇಲೆ ಆಲೋಚನೆ ಮಾಡೋಣ.

11. ವಿತ್ತೀಯ ಕಾರ್ಯಕಲಾಪ.

2006-07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೇ, ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಿಮಗೆ ಧನ್ಯವಾದಗಳು. ಆದರೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಮಂಡಿಸಿರತಕ್ಕ ಬಜೆಟ್ ಏನು ಇದೆ, ಒಬ್ಬ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ನಾನು ಅದನ್ನು ಬಜೆಟ್ ಎಂದು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಏಕೆ ಈ ರೀತಿಯಾದ ಬಜೆಟನ್ನು ಅವರು ಮಂಡಿಸಿದರೋ ನನಗೆ ಗೊತ್ತಿಲ್ಲ. ಇದನ್ನು ಬಜೆಟ್ ಎಂದು ಕರೆಯಬೇಕಾ? ಇದು ನನ್ನ ಮೊದಲನೇ ಪ್ರಶ್ನೆ. ನನ್ನ ಅಭಿಪ್ರಾಯದ ಪ್ರಕಾರ ಇದೊಂದು ಬಜೆಟ್ ಅಲ್ಲ. ನಮ್ಮ ಸ್ನೇಹಿತರು ಮಾಧುಸ್ವಾಮಿಯವರು ಮಾತನಾಡುವಾಗ ಒಂದು ವಿಚಾರವನ್ನು ಹೇಳಿದರು. This budget does not contain any projects. It is only a programme ಎಂದು ಅದರ ಜೊತೆಗೆ I beg to differ with him. This budget does not contain either projects or programmes. It is only palliatives of the budget. ಇದು ಎಲ್ಲಾ ತುಪ್ಪ ಸವರತಕ್ಕ ಕೆಲಸ ಮಾಡುವುದಕ್ಕೆ ಹೋಗಿರತಕ್ಕಂಥದ್ದು. ಬಜೆಟ್ ಎಂದರೆ ಬೇಸಿಕ್ ಏನು? ಮೂಲಭೂತ ಬಜೆಟ್ ಎಂದರೆ ಏನು? ಬಜೆಟ್ ಎಂದರೆ it should not be statistical juggling. ಒಂದು ರಾಜ್ಯದ ಆಯ ಮತ್ತು ವ್ಯಯವನ್ನು ಮಂಡಿಸತಕ್ಕ ಸಂದರ್ಭದಲ್ಲಿ ನಮಗೆ ಆದಾಯ ಎಷ್ಟಿದೆ, ಖರ್ಚು ಎಷ್ಟಿದೆ, ಈಗ ಮತ್ತು ಮುಂದೆ ನಾವು ಆದಾಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಮಾಡಬೇಕಾಗಿರತಕ್ಕ ಕೆಲಸ ಏನು ಮತ್ತು ಆ ಅದಾಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಮಾಡಬೇಕಾಗಿರತಕ್ಕ ಕೆಲಸ ಏನು ಮತ್ತು ಆ ಆದಾಯವನ್ನು ಯಾವ ಯಾವ ವಿಧದಲ್ಲಿ ಹೆಚ್ಚಿಸಿಕೊಳ್ಳಬೇಕು ಎಂಬ ಬಗ್ಗೆ ವಿವರಗಳು ಇರಬೇಕು ಏಕೆಂದರೆ ನಾವು ಆದಾಯವನ್ನು ಹೆಚ್ಚಿಸಿಕೊಳ್ಳದೇ ಹೋದರೆ ಪ್ರತಿ ವರ್ಷ ಹೆಚ್ಚಾಗತಕ್ಕ ಬೇಡಿಕೆಗಳಿಗೆ ಅವಶ್ಯಕತೆಗಳಿಗೆ ಅನುಗುಣವಾಗಿ ನಾವು ರಾಜ್ಯವನ್ನು, ರಾಜ್ಯದ ಅರ್ಥ ವ್ಯವಸ್ಥೆಯನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲ. ಆದರೆ, ಇವತ್ತು ಮಾನ್ಯ ಯಡಿಯೂರಪ್ಪನವರು ಮಂಡಿಸಿರತಕ್ಕ ಬಜೆಟ್‌ನಲ್ಲಿ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಬೇಕಾಗಿರತಕ್ಕ ಯಾವುದೇ ಮೂಲವನ್ನೂ ಕೂಡ ಈ ಬಜೆಟ್‌ನಲ್ಲಿ ಹೇಳಿಲ್ಲ. ತೆರಿಗೆ ರಹಿತ ಎಂದು ಹೇಳುತ್ತಾರೆ. ತೆರಿಗೆ ರಹಿತ ಎಂದು ಹೇಳಿದರೆ. ಅದೇನೂ ಹೆಮ್ಮೆಪಡತಕ್ಕ ವಿಚಾರವಲ್ಲ. ನಮ್ಮಲ್ಲಿ ಒಂದು ಪರಿಪಾಠ ಬಂದು ಬಿಟ್ಟಿದೆ. ತೆರಿಗೆ ಹಾಕಿದವರಿಗೇ ಹಾಕತಕ್ಕದ್ದು. ಹಿಂದಿನ ವರ್ಷ 10 ಪರ್‌ಸೆಂಟ್ ಹಾಕಿದರೆ ಈ ವರ್ಷ 15 ಪರ್‌ಸೆಂಟ್ ಹಾಕುವುದು. ಇಲ್ಲದಿದ್ದರೆ ಎರಡು ಪರ್‌ಸೆಂಟ್ ಕಡಿಮೆ ಮಾಡುವುದು. ಇಲ್ಲದಿದ್ದರೆ ಅವರಿಗೆ ಎರಡು ಪರ್‌ಸೆಂಟ್ ಜಾಸ್ತಿ ಮಾಡುವುದು. ಅಂದರೆ ವೈಡನಿಂಗ್ ಆಫ್ ಟ್ಯಾಕ್ಸೇಷನ್ ಮಾಡಬೇಕೆಂಬ ಪ್ರಜ್ಞೆಯೇ ನಮ್ಮ ತಲೆಯಲ್ಲಿ ಬರುವುದಿಲ್ಲ. ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡಬೇಕು. ಇದು ಯಾವ ಸೀಮೆಯ ಅರ್ಥಶಾಸ್ತ್ರವೆಂದು ನನಗೆ ಅರ್ಥವಾಗುತ್ತಿಲ್ಲ.

ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡದೆ ಹಾಕಿದವರಿಗೇ ಹಾಕುವುದು. ಇಲ್ಲದಿದ್ದರೆ ಅವರಿಗೆ ತೆಗೆಯುವುದು. ಹಿಂದಿನ ವರ್ಷ ಹಾಕಿದ್ದವರಿಗೆ 10 ಪರ್‌ಸೆಂಟ್ ಜಾಸ್ತಿ ಮಾಡುವುದು. ಇಲ್ಲದಿದ್ದರೆ 5 ಪರ್‌ಸೆಂಟ್ ಕಡಿಮೆ ಮಾಡುವುದು. ಆ ಸರ್ಕಾರ ಟ್ಯಾಕ್ಸ್ ಜಾಸ್ತಿ ಮಾಡಿತ್ತು. ನಾನು ಕಡಿಮೆ ಮಾಡಿದ್ದೇನೆ ಎಂದು ಬೆನ್ನನ್ನು ತಟ್ಟಿಕೊಳ್ಳತಕ್ಕದ್ದು. It is sheer non-economic approach to the taxation. Every year any sensible State has to try to widen their tax base, not putting burden on the same persons, for the same reasons. ಆ ರೀತಿಯಾದ ಪ್ರಯತ್ನ ಈ ಬಜೆಟ್‌ನಲ್ಲಿ ನಡೆದಿಲ್ಲ, ನಡೆದಿದ್ದರೆ ಎಲ್ಲಾದರೂ ಒಂದು ಕಡೆ ಉದಾಹರಣೆಯನ್ನು ತೋರಿಸಿ. ಆದರೆ ಒಂದು ವಿಷಯದಲ್ಲಿ ನಾನು ಮಾನ್ಯ ಯಡಿಯೂರಪ್ಪನವರನ್ನು ಅಪ್ರೀಷಿಯೇಟ್ ಮಾಡುತ್ತೇನೆ. ಅವರು ಬಜೆಟ್ ಮಂಡಿಸುವುದಕ್ಕೆ ಮೊದಲೇ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದರು. ನಮ್ಮ ಬಿಜೆಪಿ ಸಿದ್ಧಾಂತ ಬಜೆಟ್‌ನಲ್ಲಿ ರಿಫ್ಲೆಕ್ಸ್ ಆಗುತ್ತೆ ಎಂದು ಖಂಡಿತವಾಗಿಯೂ ಆ ಕೆಲಸವನ್ನು ಮಾಡಿದ್ದಾರೆ. ಆ ಮಾತನ್ನು ಅವರು ಉಳಿಸಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಪ್ರೀಷಿಯೇಟ್ ಮಾಡುತ್ತೇನೆ. ಅದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮತ್ತೆ ನಾನು ಅಂಕಿಅಂಶಗಳನ್ನು ಹೇಳುತ್ತೇನೆ. ದೇವಸ್ಥಾನಗಳಿಗೆ, ಚರ್ಚ್, ಗುಡಿಗಳಿಗೆ, ಮಸೀದಿಗಳಿಗೆ ಕೊಟ್ಟಿರುವ ಹಣವನ್ನು ನೀವು ಲೆಕ್ಕ ಹಾಕಿಬಿಟ್ಟರೆ, ಗೊತ್ತಾಗಿಬಿಡುತ್ತೆ. ಅವರು ದೇವಸ್ಥಾನಗಳಿಗೆ ಕೊಟ್ಟಿರತಕ್ಕ ಹಣ ಮತ್ತೆ ಕೈಲಾಸ ಯಾತ್ರೆಗೆ ಕೊಟ್ಟಿರುವ ಹಣ ಇವೆಲ್ಲವನ್ನೂ ನೋಡಿದರೆ he is true to his philosophy. That is why I am appreciating him.

ಶ್ರೀ ವಾಟಾಳ್ ನಾಗರಾಜ್: ಅವರು ಕೈಲಾಸ ಪರ್ವತ ಎಂದು ಕೊಟ್ಟಿರುವುದು. ಇವರು " ಕೈಲಾಸ ಯಾತ್ರೆ " ಅಂದರು " ಕೈಲಾಸ ಯಾತ್ರೆ " ಅಂದರೆ ಸ್ವತ್ತು ಹೋದಂತೆ. ಛೇ.ಛೇ. ಕೈಲಾಸ ಯಾತ್ರೆಗೆ 25 ಲಕ್ಷ ರೂ. ಹಣವನ್ನು ಇಟ್ಟಿದ್ದಾರೆ ಎಂದರೆ ಇದು ಯಾವ ನ್ಯಾಯ? ಇದಂತಹ ಕೈಲಾಸ ಯಾತ್ರೆ? ಇದೇನು ನೀವು ಹೀಗೆ ಶುರು ಮಾಡಿದಿರಿ?

ಶ್ರೀ ಬಿ.ವಿ. ಶ್ರೀರಾಮರೆಡ್ಡಿ: ಮತ್ತೆ ಅದೇ ರೀತಿಯಲ್ಲಿ ಅವರು ಇವತ್ತು ಯಾವ ಪ್ರದೇಶಗಳನನ್ನು ಅಭಿವೃದ್ಧಿ ಮಾಡಬೇಕೆಂದು ಹೇಳಿದ್ದಾರೆ, ಆ ಪ್ರದೇಶಗಳನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ, ಅವರು ಯಾರ ಪರವಾಗಿ ಬಜೆಟನ್ನು ಮಂಡಿಸಿದ್ದಾರೆ ಎಂದು. ಡಾ: ನಂಜುಡಪ್ಪನವರ ವರದಿ ಬಗ್ಗೆ ನಾವು ಜಪ ಮಾಡುವುದಷ್ಟೆ. ಡಾ: ನಂಜುಂಡಪ್ಪನವರ ವರದಿಯಲ್ಲಿ ಮೋಸ್ಟ್ ಬ್ಯಾಕ್‌ವಾರ್ಡ್ ತಾಲ್ಲೂಕುಗಳು 39 ಎಂದು ಗುರುತು ಮಾಡಿದ್ದಾರೆ. Backward, More Backward and Most Backward Taluks ಎಂದು ಮೋಸ್ಟ್ ಬ್ಯಾಕ್‌ವಾರ್ಡ್ ತಾಲ್ಲೂಕಿನಲ್ಲಿ ಬರುವ ಎಷ್ಟು ತಾಲ್ಲೂಕುಗಳನ್ನು ಅಭಿವೃದ್ಧಿ ಯೋಜನೆಯಲ್ಲಿ ಅವರು ಸೇರಿಸಿಕೊಂಡಿದ್ದಾರೆ ಎಂಬುದನ್ನು ಹೇಳಲಿ. ಶಿಕಾರಿಪುರ ಮೋಸ್ಟ್ ಬ್ಯಾಕ್‌ವಾರ್ಡ್‌ನಲ್ಲಿ ಬರುತ್ತಾ? ರಾಮನಗರ ಮೋಸ್ಟ್ ಬ್ಯಾಕ್‌ವಾರ್ಡ್‌ನಲ್ಲಿ ಬರುತ್ತಾ? ಜೇವರ್ಗಿ ಮೋಸ್ಟ್ ಬ್ಯಾಕ್‌ವಾರ್ಡ್‌ನಲ್ಲಿ ಬರುತ್ತಾ? ಪಾಪ, ಧರ್ಮಸಿಂಗ್‌ರವರಿಗೆ ಟೋಪಿ ಹಾಕಲಿಕ್ಕೆ ಮಾಡಿರುವ ಕೆಲಸ ಇದು. ಅಂದರೆ ನಂಜುಡಪ್ಪನವರ ವರದಿಯನ್ನು ಹೇಳಲಿಕ್ಕೆ. ಏಕೆಂದರೆ ನಮ್ಮ ಭಾರತ ದೇಶದಲ್ಲಿ ಒಂದು ಪರಂಪರೆ ಇದೆ. ಬುದ್ಧ, ಬಸವ, ಅಂಬೇಡ್ಕರ್ ಗಾಂಧಿ ಅವರ ಹೆಸರುಗಳನ್ನು ಹೇಳಿಕೊಂಡು ಬರುತ್ತಿರುವುದು ಅವರು

ಹೇಳಿದ್ದನ್ನು ಮಾತ್ರ ಒಂದು ಮಾಡುವುದೂ ಬೇಡ. ಇದು ನಮ್ಮ ಪರಿಸ್ಥಿತಿ. ಆಮೇಲೆ ಒಂದು ಬಜೆಟ್‌ನ್ನು ಮಂಡಿಸುವಾಗ, ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಅಂದರೆ ಗ್ರೋಥ್ ಓರಿಯೆಂಟೆಡ್ ಬಜೆಟ್‌ಗೆ ಒತ್ತು ಕೊಡಬೇಕು ಆರ್ಥಿಕ ಇಲಾಖೆಯಲ್ಲಿ ಒಳ್ಳೆ ಒಳ್ಳೆಯ ಅಧಿಕಾರಿಗಳಿದ್ದಾರೆ, ಏಕೆ ಹೀಗೆ ಮಾಡಿದರೋ ನನಗೆ ಅರ್ಥವಾಗುತ್ತಿಲ್ಲ. ಗ್ರೋಥ್ ಓರಿಯೆಂಟೇಷನ್, ಎಕಾನಾಮಿಕ್ ಗ್ರೋಥ್, ಅಸೆಟ್ ಕ್ರಿಯೇಷನ್ ಮಾಡತಕ್ಕದ್ದು. More importantly, employment generation ಎಂಪ್ಲಾಯ್‌ಮೆಂಟ್ ಜನರೇಟ್ ಮಾಡದೇ ಆರ್ಥಿಕ ವ್ಯವಸ್ಥೆಯನ್ನು ಬೆಳವಣಿಗೆಯ ದಾರಿಯಲ್ಲಿ ತೆಗೆದುಕೊಂಡು ಹೋಗದೇ ಮತ್ತು ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳದೇ ಹೇಗೆ ನೀವು ಈ ರಾಜ್ಯದ ಆಯ ಮತ್ತು ವ್ಯಯವನ್ನು ತೂಗಿಸುತ್ತೀರಿ Without generation employment? ಇದು No.1, ಹೇಗೆ ನೀವು ಕಾಮನ್ ಮ್ಯಾನ್ ಪರ್ಚೇಸಿಂಗ್ ಕೆಪ್ಯಾಸಿಟಿಯನ್ನು ಇನ್‌ಕ್ರೀಸ್ ಮಾಡುತ್ತೀರಿ? ಬಡತನವನ್ನು ಹೇಗೆ ತೊಲಗಿಸುತ್ತೀರಿ? ಎಂಪ್ಲಾಯ್‌ಮೆಂಟ್ ಜನರೇಟ್ ಮಾಡದೇ ಬಡತನವನ್ನು ಹೇಗೆ ಕಡಿಮೆ ಮಾಡುತ್ತೀರಿ? ಎಂಪ್ಲಾಯ್‌ಮೆಂಟ್ ಜನರೇಟ್ ಮಾಡದೇ, ನಾನು ಅಕ್ಕಿಯನ್ನು 3 ರೂ.ಗೆ ಕೊಡುತ್ತೇನೆಂದು ಹೇಳಿದರೆ, ಪರ್ಮನೆಂಟ್ ಆಗಿ ಹಳ್ಳಿಗಾಡಿನಲ್ಲಿರತಕ್ಕಂಥವರನ್ನು ನೀವು ಭಿಕ್ಷುಕರನ್ನಾಗಿ ಮಾಡಬೇಕಾ? Do you want to make them permanent beggars before the Government? Insteed of that, give employment to each family. ಅದೇ ರೀತಿಯಲ್ಲಿ ಕೇಂದ್ರ ಸರ್ಕಾರ 'ರೇಗಾ' ಅಂದರೆ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಎಂದು ತಂದಿದೆ. ನಿಮ್ಮ ಬಜೆಟ್‌ನಲ್ಲಿ ಎಲ್ಲಾದರೂ ರೇಗಾ ಬಗ್ಗೆ ಹೇಳಿದ್ದೀರಾ? ಮೋಸ್ಟ್ ಇಂಪಾರ್ಟೆಂಟ್, ರೂರಲ್ ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ಬಹಳ ಕಷ್ಟಬಿದ್ದು ಯುಪಿಎ ಸರ್ಕಾರ, in two years, straight away brought ಅವರು 300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೆಲವು ಡಿಸ್ಟ್ರಿಕ್ಟ್‌ಗಳನ್ನು ಆಯ್ಕೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲೂ ಐದು ಜಿಲ್ಲೆಗಳನ್ನು ಆಯ್ಕೆ ಮಾಡಿದ್ದಾರೆ. ನೀವು ಹಿಂದೆ ಹೇಳಿದಿರಿ, "ಹಿಂದಿನ ವರ್ಷ, ಕೇಂದ್ರ ಸರ್ಕಾರ ನಮ್ಮಲ್ಲಿ ಐದು ಜಿಲ್ಲೆಗಳನ್ನು ಆಯ್ಕೆ ಮಾಡಿದೆ, ಅದರ ಜೊತೆಗೆ ನಾವು ಇನ್ನೂ ಸ್ವಂತವಾಗಿ ಒಂದೆರಡು ಜಿಲ್ಲೆಗಳನ್ನು ಆಯ್ಕೆ ಮಾಡಿದೆ, ಅದರ ಜೊತೆಗೆ ನಾವು ಇನ್ನೂ ಸ್ವಂತವಾಗಿ ಒಂದೆರಡು ಜಿಲ್ಲೆಗಳನ್ನು ಸೇರಿಸಿಕೊಂಡು ಎಂಪ್ಲಾಯ್‌ಮೆಂಟ್ ಜನರೇಷನ್ ಮಾಡುತ್ತೇನೆ" ಎಂದು ಹೊಸದಾಗಿ ಸೇರಿಸಿಕೊಳ್ಳುವುದು ಬಿಡಿ. ಈಗ ಸೇರಿಸಿರುವ ಐದು ಜಿಲ್ಲೆಗಳಲ್ಲಿ ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ಒಂದೇ ಒಂದು ಅಕ್ಷರ, ಚಕಾರ ಶಬ್ದ ಕೂಡ ಈ ಬಜೆಟ್‌ನಲ್ಲಿ ಇಲ್ಲ. ಅಂದರೆ ನಿಮ್ಮ ಉದ್ದೇಶ ಅದನ್ನು ಜಾರಿ ಮಾಡುತ್ತೀರೋ? ಜಾರಿ ಮಾಡುವುದಿಲ್ಲವೇ?

ಏಕೆಂದರೆ ಆ ಸ್ಕೀಮ್ ಪ್ರಕಾರ ನೀವು ಒಂದಿಷ್ಟು ಪರ್ಸೆಂಟ್ ಹಣ ಕೊಡಬೇಕಾಗಿದೆ. ನೀವು ಜಾರಿ ಮಾಡಬೇಕಾಗುತ್ತದೆ. ಜಾರಿ ಮಾಡುವುದಕ್ಕೆ ಬೇಕಾದಂತಹ ಪೂರಕ ತಯಾರಿಗಳನ್ನು ಮಾಡಲಿಕ್ಕೆ ಏನು ಕಾರ್ಯಕ್ರಮವನ್ನು ನೀವು ರೇಗಾದಲ್ಲಿ ಹಾಕಿಕೊಂಡಿದ್ದೀರಿ? ಏನೂ ಹಾಕಲಿಲ್ಲ. ಅದು ಕೇಂದ್ರ ಸರ್ಕಾರ ಅಲ್‌ರೆಡಿ ರೂಪಿಸಿರತಕ್ಕದ್ದು. ಎರಡನೆಯ ಅಂಶ, ರಾಜ್ಯ ಸ್ವತಃ ತಾನು ಉದ್ಯೋಗವಕಾಶಗಳನ್ನು ಸೃಷ್ಟಿ ಮಾಡತಕ್ಕದ್ದಕ್ಕೆ ಎಂದರೆ ಅವಿದ್ಯಾವಂತಹ ನಿರುದ್ಯೋಗಿಗಳಿಗೆ ಆಗಿರಬಹುದು, ವಿದ್ಯಾವಂತ ನಿರುದ್ಯೋಗಿಗಳಿಗೆ ಆಗಿರಬಹುದು, ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥ ಯಾವುದಾದರೂ ಒಂದು ಕಾರ್ಯಕ್ರಮವನ್ನು ನೀವು ರೂಪಿಸಿದ್ದೀರಾ? ಆರ್ಥಿಕ

ಸಮೀಕ್ಷೆಯ ವರದಿಯಲ್ಲಿ ಏನು ಹೇಳುತ್ತಿದ್ದೀರಿ? " ರಾಜ್ಯದ ಒಟ್ಟು ಉದ್ಯೋಗ ಬಲದಲ್ಲಿ ಪ್ರಾಥಮಿಕ ವಲಯದ ಅವಲಂಬಿತ ಉದ್ಯೋಗ ವಲಯವು ಶೇಕಡಾ 62.6 ರಿಂದ ಶೇಕಡಾ 60ಕ್ಕೆ ಇಳಿಮುಖವಾಗಿದೆ. " Employment opportunity has come down. ಎಂದು ಮತ್ತೆ ಏನು ಹೇಳುತ್ತೀರಿ. "ರಾಜ್ಯದ ಸಂಘಟಿತ ವಲಯ ಉದ್ಯೋಗದಲ್ಲಿ ಅಲ್ಪ ಏರಿಕೆ ಆಗಿದ್ದು ಮಾರ್ಚ್ 2005ರ ಕೊನೆಯಲ್ಲಿ 18.62 ಲಕ್ಷಗಳಾಗಿದ್ದು, ಸೆಪ್ಟೆಂಬರ್ 2005ರ ಕೊನೆಯಲ್ಲಿ 18.87 ಲಕ್ಷಗಳಾಗಿದೆ". . . . . ಸಾಕಾ? ಪ್ರಥಮ ವಲಯದಲ್ಲಿ ಇದು. ಹಾಗಾದರೆ ಈ ಸರ್ಕಾರಕ್ಕೆ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡುವುದರ ಬಗ್ಗೆ ಏನೂ ಕಾರ್ಯಕ್ರಮ ಇಲ್ಲವಾ ಅಥವಾ ಕಾರ್ಯಕ್ರಮ ಹಾಕುವುದಿಲ್ಲವಾ? ನೀವು ಬೆಳವಣಿಗೆ ಆಗುತ್ತಿದೆ ಎಂದು ಹೆಳುತ್ತೀರಿ. ಏನು ರಾಜ್ಯದ ಅರ್ಥ ವ್ಯವಸ್ಥೆ ಬೆಳವಣಿಗೆ ಆಗುತ್ತದೆ? ಹೇಗೆ ಬೆಳವಣಿಗೆ ಆಗುತ್ತದೆ? Do you want to make the State to have a jobless growth? Jobless growth means, nothing but cheating the people. ಅಂದರೆ ಯಾವಾಗಲೂ ಶಾಶ್ವತವಾಗಿ ಜಾಬ್‌ಲೆಸ್ ಗ್ರೋತ್ ಅದಾಗ ಆ ಬಂಡವಾಳ ಇರತಕ್ಕಂಥವರು, ಶಕ್ತಿ ಇರತಕ್ಕಂಥವರು ಮಾತ್ರ ಬದುಕುತ್ತಾರೆಯೇ ಹೊರತು ಬೇರಯವರು ಬದುಕಲಿಕ್ಕೆ ಸಾಧ್ಯನೇ ಇಲ್ಲ; ಅವಕಾಶನೂ ಇಲ್ಲ. ಮತ್ತೆ ಎರಡನೆಯದಾಗಿ ಇವತ್ತು ಕೃಷಿ ರಂಗದ ಬೆಳವಣಿಗೆ ಮೊದಲನೆಯದು. ಕೃಷಿ ರಂಗದ ಆದ್ಯತೆ ನಿಮ್ಮ ಬಜೆಟ್. ನನಗೆ ಬಜೆಟ್ ನೋಡಿ ಆಶ್ಚರ್ಯ ಆಯಿತು. ಹಿಂದಿನ ಎಲ್ಲಾ ವರ್ಷಗಳಲ್ಲೂ ಕೂಡ ನಮ್ಮ ಕರ್ನಾಟಕ ರಾಜ್ಯದ ಜನರ, ಜನಸಂಖ್ಯೆಗೆ ಅನುಗುಣವಾಗಿ ಆಹಾರ ಸಾಮಗ್ರಿಗಳು ಎಷ್ಟು ಬೇಕು? ನಾವು ಎಷ್ಟು ಉತ್ಪಾದನೆ ಮಾಡಬೇಕು ಎಂದು ಹೇಳಿ ಟಾರ್ಗೆಟನ್ನು ಹಾಕಿದ್ದೇವೆ? ಅದು ಎಷ್ಟು ಉತ್ಪಾದನೆ ಆಗಿದೆ ಎನ್ನತಕ್ಕದ್ದನ್ನು ಕನಿಷ್ಟ ಬಜೆಟ್‌ನಲ್ಲಿ ಮೆನ್‌ಷನ್ ಮಾಡುತ್ತಿದ್ದರು, ಆದರೆ ಈ ಸರ್ಕಾರ ಅದರ ಬಗ್ಗೆ ಏನನ್ನೂ ಹೇಳಲಿಲ್ಲ. ಅಂದರೆ ನಾವೇನು ಅನ್ನ ತಿನ್ನುವುದು ಬೇಡವಾ? ಈ ರಾಜ್ಯದ ಅನ್ನ ತಿನ್ನುವುದು ಬೇಡವಾ? ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆ ಎಷ್ಟು? ನಮ್ಮ ರಿಕ್ವೈರ್‌ಮೆಂಟ್ ಎಷ್ಟು? ಫುಡ್‌ಗ್ರೈನ್ಸ್‌ನ ರಿಕ್ವೈರಿಮೆಂಟ್ ಎಷ್ಟು ಇದೆ? ಪ್ರೊಡಕ್ಷನ್ ಎಷ್ಟು ಇದೆ? ನಮ್ಮ ಪ್ರೊಡಕ್ಷನ್ ನಮ್ಮ ರಿಕ್ವೈರ್‌ಮೆಂಟಿಗೆ ಅನುಗುಣವಾಗಿದೆಯಾ ಅಥವಾ ಹೆಚ್ಚು ಇದೆಯಾ? ಕಡಿಮೆ ಇದೆಯಾ ಎನ್ನುವುದರ ಬಗ್ಗೆ ಎಲ್ಲೂ ಕೂಡ ಪ್ರಸ್ತಾಪ ಇಲ್ಲ. ಕಡಿಮೆ ಇದ್ದರೆ ಅದನ್ನು ಹೆಚ್ಚು ಮಾಡಲಿಕ್ಕೆ ಬೇಕಾಗಿರತಕ್ಕಂಥ ಕಾರ್ಯಕ್ರಮಗಳನ್ನು ನಾವು ಹಾಕಬೇಕಲ್ಲಾ. ಈಗ ಹಿಂದಿನ ವರ್ಷದ ಆಯವ್ಯಯದಲ್ಲಿ ಮತ್ತು ಪ್ಲಾನಿಂಗ್ ಕಮೀಷನ್‌ನವರು ಏನು ಪ್ಲಾನ್ ಅಲೋಕೇಶನ್ ಮಾಡಿದರು? ಎಂಬುದನ್ನು ನೋಡೋಣ. ಅವರು ಹೇಳಿರುವ ಪ್ರಕಾರವೇ ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಪ್ರತಿವರ್ಷ ಅಂದರೆ 10 ಲಕ್ಷ ಟನ್ ಹೆಚ್ಚು ಕಡಿಮೆ, ನಮಗೆ 1 ಲಕ್ಷ 49 ಸಾವಿರ ಮಿಲಿಯನ್ ಟನ್ ಆಹಾರ ಸಾಮಗ್ರಿಗಳು ಬೇಕು. ಹಿಂದಿನ ವರ್ಷದ ಬಜೆಟ್‌ನಲ್ಲಿ ಏನು ಹೇಳಿದಿರಿ? ನಮ್ಮದು ಈಗ 85 ಲಕ್ಷ 40 ಸಾವಿರ ಟನ್ ಆಹಾರ ಸಾಮಗ್ರಿಗಳ ಉತ್ಪಾದನೆ ಇದೆ. ನಮ್ಮ ಟಾರ್ಗೆಟ್ 87 ಲಕ್ಷ ಆಗಬೇಕು ಎಂದು ಇದೆ. ಅದನ್ನು ಸಾಧಿಸತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆಂದು ಮಾನ್ಯ ಸಿದ್ಧರಾಮಣ್ಣನವರು ಹೇಳಿದ್ದರು. ಆದರೆ ಈ ವರ್ಷ ನಮ್ಮ ಟಾರ್ಗೆಟ್ ಎಷ್ಟು. ನಮ್ಮ ರಿಕ್ವೈರ್‌ಮೆಂಟ್ ಎಷ್ಟು. ನಮಗೆ ಕಡಿಮೆ ಆಗಿರುವುದನ್ನು ಹೆಚ್ಚಿಗೆ ಮಾಡಿಕೊಳ್ಳಲಿಕ್ಕೆ ಬೇಕಾಗಿರತಕ್ಕಂಥ ಕಾರ್ಯಕ್ರಮ ಏನು ಎಂತಲೂ ಇಲ್ಲ. ಇದು ಒಂದನೆಯ ಅಂಶ. ಎರಡನೆಯ ಅಂಶ ನೀವು ಕೃಷಿ ರಂಗದ ಬಗ್ಗೆ ಸಾಲದ ಬಡ್ಡಿ ಕಡಿಮೆ

ಮಾಡಿದ್ದೇವೆಂದು ಹೇಳಿದಿರಿ. ಸ್ವಾಗತಾರ್ಹ. ಆದರೆ ಒಂದನ್ನು ನೀವು ತಿಳಿದು ಕೊಳ್ಳಬೇಕು. ನಿಮ್ಮ ಕೋ ಅಪರೇಟಿವ್ ಬ್ಯಾಂಕ್‌ನ ಪರಿಸ್ಥಿತಿ ಇವತ್ತು ಏನಾಗಿದೆ? ಯಾವ ಸ್ಥಿತಿಯಲ್ಲಿ ಅವು ಇವೆ? ಅಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ ಏನಾದರೂ ಸಾಧ್ಯ ಉಂಟಾ? ತೆಗೆದುಕೊಂಡರೆ ಎಷ್ಟು ಪರ್ಸೆಂಟ್ ಜನ ತೆಗೆದುಕೊಳ್ಳುತ್ತಾರೆ? ಎಷ್ಟು ಜನ ರೈತರಿಗೆ ಅದು ಪ್ರಯೋಜನ ಆಗುತ್ತದೆ? ಎಲ್ಲಾ ನಿಮ್ಮ ಅಭಿಪ್ರಾಯ ಏನಿರಬಹುದು ಎಂದರೆ, ನಾವು ಕಡಿಮೆ ಬಡ್ಡಿ ದರಕ್ಕೆ ಸಾಲ ಕೊಟ್ಟರೆ ರೈತರು ಉದ್ಧಾರ ಆಗುತ್ತಾರೆ ಎಂದು ಹೇಳಿ. ಇದು ಸಾಧ್ಯವೇ ಇಲ್ಲ. ಬರೇ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಟ್ಟು ಕೃಷಿ ರಂಗವನ್ನು ನಾವು ಉದ್ಧಾರ ಮಾಡುತ್ತೇವೆ ಎಂದರೆ ಅದು ಸಾಧ್ಯ ಇಲ್ಲ. ಕೃಷಿ ರಂಗದ ಉತ್ಪಾದನೆ ಹೆಚ್ಚಾಗಬೇಕು. ಕೃಷಿ ರಂಗದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಬೇಕು. ಮೂರನೆಯದು ಬಹಳ ಮುಖ್ಯವಾದಂತಹ ಪ್ರಶ್ನೆ ಹಳ್ಳಿಯ ಪ್ರದೇಶದಲ್ಲಿರತಕ್ಕಂಥ ಬಡವರಿಗೆ ಕೊಂಡುಕೊಳ್ಳತಕ್ಕಂಥ ಶಕ್ತಿಯನ್ನು ನಾವು ಹೆಚ್ಚು ಮಾಡಬೇಕು. ಕೊಂಡುಕೊಳ್ಳತಕ್ಕ ಶಕ್ತಿಯನ್ನು ಅವರಿಗೆ ಹೆಚ್ಚು ಮಾಡಬೇಕೇ ಹೊರತು ಭಿಕ್ಷೆ ಹಾಕತಕ್ಕಂಥ ಕೆಲಸವನ್ನು ನಾವು ಮಾಡಬೇಕಾಗಿಲ್ಲ. ರೂರಲ್ ಪೂರ್ ಏನು ಇದ್ದಾರೆ, ಅವರ ಕೊಂಡುಕೊಳ್ಳತಕ್ಕಂಥ ಶಕ್ತಿಯನ್ನು ಹೆಚ್ಚು ಮಾಡಲಿಕ್ಕೆ ನಾವು ಏನಾದರೂ ಕಾರ್ಯಕ್ರಮವನ್ನು ಹಾಕಿದ್ದೇವಾ? ಇವತ್ತು ರೂರಲ್ ಪೂರ್ ಏನು ಇದ್ದಾರೆ, ಅವರ ಪರ್ಚೇಸಿಂಗ್ ಕೆಪ್ಯಾಸಿಟಿ ಯಾವ ಸ್ಥಿತಿಗೆ ಬಂದಿದೆ ಗೊತ್ತಾ ಮಾನ್ಯ ಅಧ್ಯಕ್ಷರೆ? ನಾನು ಕೊಟ್ಟಿರತಕ್ಕಂಥ ವರದಿ ಅಲ್ಲ ಇದು. ನ್ಯಾಷನಲ್ ಸ್ಯಾಂಪಲ್ ಸರ್ವೆನವರು ಕೊಟ್ಟಿರ ತಕ್ಕಂಥ ಅಂಕಿ ಅಂಶಗಳು ಏನು ಹೇಳುತ್ತದೆ ಎಂದರೆ "80% purchasing capacity has come down in the whole of Inida." ಹಿಂದಿನ ವರ್ಷಕ್ಕೆ ಕಂಫೇರ್ ಮಾಡಿದರೆ 80 ಪರ್ಸೆಂಟ್ ಕೊಂಡುಕೊಳ್ಳತಕ್ಕಂಥ ಶಕ್ತಿ ಕಡಿಮೆ ಆಗಿದೆ. ಅದಕ್ಕೆ ಅವರು ಒಂದು ಲೆಕ್ಕ ಹೇಳುತ್ತಾರೆ. The Per capita avaliability of food grains in the country has come down to around 152 Kgs per head. This is a figure, which is close to what it used to be during the days of Bengal Famine." ಎಲ್ಲಿದ್ದೇವೆ ನಾವು? ಬೆಂಗಾಲ್ ಫ್ಯಾಮಿನ್ 1942ರಲ್ಲಿ ಇತ್ತು. 1942 ನಲ್ಲಿ ನಮ್ಮ ಹಳ್ಳಿಗಾಡಿನ ಪ್ರದೇಶದ ಜನರಲ್ಲಿ ಕೊಂಡುಕೊಳ್ಳತಕ್ಕ ಶಕ್ತಿ ಎಷ್ಟು ಇತ್ತೋ ಆ ಲೆವಲ್‌ಗೆ ಇವತ್ತು ನಾವು ತಂದಿದ್ದೇವೆ. It is not my statement. It is the statement of the National Sample Survey and Economic Survey of India. ಹಾಗಾದರೆ ನಾವು ಗ್ರಾಮೀಣ ಭಾಗದ ಬಗ್ಗೆ ಮಾತನಾಡತಕ್ಕದ್ದು ಎಲ್ಲವೂ ಏನು? ಕೃಷಿ ರಂಗದ ಮೂಲಭೂತ ಅವಶ್ಯಕತೆ ಏನು? ಭೂಮಿ, ನೀರು. ಭೂಮಿ ಇಲ್ಲದೇ, ಅಂದರೆ ಉಳುವವನಿಗೆ ಭೂಮಿ ಇಲ್ಲದೇ, ಭೂಮಿಗೆ ನೀರು ಇಲ್ಲದೇ, ವ್ಯವಸಾಯ ರಂಗವನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗುತ್ತದಾ? ಇದು ಒಂದನೆಯ ಪ್ರಶ್ನೆ. ಅದಕ್ಕೆ ನಿಮ್ಮ ಬಜೆಟ್‌ನಲ್ಲಿ ಏನು ಕಾರ್ಯಕ್ರಮವನ್ನು ಹಾಕಿದ್ದೀರಿ? Budget is supposed to be the economic progremme of a Government. It think so. ಈ ಆರ್ಥಿಕ ಕಾರ್ಯಕ್ರಮದಲ್ಲಿ, ಕೃಷಿ ರಂಗದಲ್ಲಿ ಉತ್ಪಾದನೆ ಮಾಡಲಿಕ್ಕೆ ಉಳುವವನಿಗೇ ಭೂಮಿ ಕೊಳ್ಳಲಿಕ್ಕೆ, ಭೂಮಿಗೆ ನೀರು ಕೊಡಲಿಕ್ಕೆ ನೀವು ಏನು ಕಾರ್ಯಕ್ರಮವನ್ನು ಹಾಕಿದ್ದೀರಿ? ಈಗ ಇಡೀ ಕರ್ನಾಟಕ ರಾಜ್ಯದಲ್ಲಿ ನೀವೇ ಲೆಕ್ಕ ಹೇಳುವ ಪ್ರಕಾರ, ಮೇಜರ್ ಇರಿಗೇಷನ್‌ನಿಂದ, ಇರಿಗೇಟೆಡ್ ಲ್ಯಾಂಡ್ ಆಗಿರತಕ್ಕಂಥದ್ದು 28 ಪರ್ಸೆಂಟ್. ಹೋಗಲಿ 32 ಅಂತ ಇಟ್ಟುಕೊಳ್ಳೋಣ, 35 ಅಂತ ಇಟ್ಟುಕೊಳ್ಳೋಣ. ನಾನು ಹೇಳುತ್ತಿರುವುದು ಮೇಜರ್

ಇರಿಗೇಷನ್ ಬಗ್ಗೆ, ಬೇರೆ ಇರಿಗೇಷನ್‌ದ್ದು ಅಲ್ಲ. ಮೇಜರ್ ಇರಿಗೇಷನ್‌ನಿಂದ ಆಗುತ್ತಿರತಕ್ಕಂಥ ಇರಿಗೇಟೆಡ್ ಭೂಮಿ ಎಷ್ಟು? 15.4 ಲಕ್ಷ ಹೆಕ್ಟೇರ್. ಇನ್ನು ಉಳಿದಿದ್ದು ಎಲ್ಲವೂ ಕೂಡ ಮೈನರ್ ಇರಿಗೇಷನ್. ಆ ಮೈನರ್ ಇರಿಗೇಷನ್‌ಗೆ ನಿಮ್ಮ ಬಜೆಟ್‌ನಲ್ಲಿ ಎಷ್ಟು ಹಣವನ್ನು ಇವತ್ತು ಇಟ್ಟಿದ್ದೀರಿ? ಹೇಳಿ. ನಿಮ್ಮ ಬಜೆಟ್‌ನಲ್ಲಿ ಎಲ್ಲಾದರೂ ಒಂದು ಕಡೆ ಮೈನರ್ ಇರಿಗೇಷನ್‌ಗೆ "ಇಷ್ಟು ಹಣ ತೆಗೆದು ಇಟ್ಟಿದ್ದೇವೆ? ಹೇಳಿ. ನಿಮ್ಮ ಬಜೆಟ್‌ನಲ್ಲಿ ಎಲ್ಲಾದರೂ ಒಂದು ಕಡೆ ಮೈನರ್ ಇರಿಗೇಷನ್‌ಗೆ "ಇಷ್ಟು ಹಣ ತೆಗೆದು ಇಟ್ಟಿದ್ದೇವೆ" ಎನ್ನತಕ್ಕ ವಿಚಾರವನ್ನು ನೀವು ಹೇಳಿದ್ದೀರಾ? ನಬಾರ್ಡ್ ಸ್ಕೀಮ್‌ಗಳನ್ನು ಬಿಟ್ಟು ನೀವು ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ? It is a negligible amount. It is not a considerable amount. ಕನ್ಸಿಡಬರಲ್ ಅಮೌಂಟೇ ಅಲ್ಲ. ಆದರೆ 80 ಪರ್ಸೆಂಟ್ ಇವತ್ತು ಮೈನರ್ ಇರಿಗೇಷನ್‌ನಿಂದ ಕೃಷಿ ರಂಗದಲ್ಲಿ ನೀರಾವರಿಗೆ ಇರತಕ್ಕಂಥದ್ದು. ಬೇರೆ ಸೆಕ್ಟಾರ್‌ನ್ನು ಏನು ಮಾಡಿದಿರಿ? ಮತ್ತೆ ಇರಿಗೇಷನ್‌ನಲ್ಲಿ ಹೆಚ್ಚು ಲ್ಯಾಂಡನ್ನು ಇರಿಗೇಟೆಡ್ ಲ್ಯಾಂಡ್ ಆಗಿ ಮಾಡಬೇಕು ಎಂದು ಹೇಳತಕ್ಕ ನಿಮ್ಮ ಘೋಷಣೆ ನಿಮ್ಮ ಘೋಷಿತ ಕಾರ್ಯಕ್ರಮ ಅದು. ಈ ವರ್ಷ ಎಷ್ಟು ಹೊಸ ಭೂಮಿಯನ್ನು irrigated facilitiesಗೆ ತರುವುದಕ್ಕೆ ನೀವು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಬಯಲುಸೀಮೆ ಪ್ರದೇಶದವರಾದ ನಾವು ಗೋಳಾಡುತ್ತಿದ್ದೇವೆ. ಕನಿಷ್ಠ ನಮಗೆ ಕುಡಿಯುವುದಕ್ಕೆ ನೀರನ್ನಾದರೂ ಕೊಡಿರೆಂದು ನಿಮ್ಮನ್ನು ಬೆಗ್ ಮಾಡುತ್ತಿದ್ದೇವೆ. ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿರುವ ಜಿಲ್ಲೆಗಳಾದ ಕೋಲಾರ, ಬೆಂಗಳೂರು(ಗ್ರಾಮಾಂತರ), ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, part of Mandya, Davanagere, ಇವೆಲ್ಲಾ ಜಿಲ್ಲೆಗಳಲ್ಲಿ ಇವೊತ್ತಿಗೂ ನೀರು ಕೊಡುವ ಕಾರ್ಯಕ್ರಮವನ್ನು ನೀವು ಏನೂ ಬಜೆಟ್‌ನಲ್ಲಿ ರೂಪಿಸಿಲ್ಲ. ಹಿಂದಿನ ಧರ್ಮಸಿಂಗ್‌ರವರ ಸರ್ಕಾರ, ಪರಮಶಿವಯ್ಯನವರ ವರದಿಯ ಆಧಾರದ ಮೇಲೆ ಪಶ್ಚಿಮಘಟ್ಟದಲ್ಲಿ ಹರಿಯುವ ನೇತ್ರಾವತಿ ನದಿ ತಿರುವು ಯೋಜನೆಗೆ ಸುಮಾರು 15 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ವೆ ಕಾರ್ಯಕ್ರಮಕ್ಕೆ ಮೀಸಲಿಟ್ಟಿತ್ತು. ಆ ಸರ್ವೆ ಏನಾಗಿದೆ? ಅದು ಮುಗಿದಿದೆಯೇ? ಅವರು ರಿಪೋರ್ಟ್ ಕೊಟ್ಟಿದ್ದಾರೆಯೇ? ಅದಕ್ಕೆ ನಾವೇನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕೇ? ಬೇಡವೇ? ಇನ್ನು Controversial Bhadra, ಬರಗಾಲಪೀಡಿತ ಪ್ರದೇಶಕ್ಕೆ ನೀರು ಕೊಡತಕ್ಕಂಥಾದ್ದು. ಅದಕ್ಕೆ ನೀವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಎಲ್ಲಿ ಹಾಕಿಕೊಂಡಿದ್ದೀರಿ? ಬಜೆಟ್‌ನಲ್ಲಿ ಹಣ ತೆಗೆದಿಟ್ಟಿದ್ದೀರಾ? ಎಲ್ಲಿ ತೆಗೆದಿಟ್ಟಿದ್ದೀರಿ? ಎಲ್ಲಿಯೂ ಸಹ ತೆಗೆದಿಡಲಿಲ್ಲ. ಹಾಗಾದರೆ, ಹೆಚ್ಚು ಭೂಮಿಯನ್ನು ನೀರಾವರಿಗೆ ಒಳಪಡಿಸುವ ಕಾರ್ಯಕ್ರಮಕ್ಕೆ ನೀವು ಎಲ್ಲಿ ಆದ್ಯತೆ ಕೊಟ್ಟಿದ್ದೀರಿ? ಏನು ಆದ್ಯತೆ ಕೊಟ್ಟಿದ್ದೀರೆಂದು ದಯವಿಟ್ಟು ಹೇಳಬೇಕು. ನಾವು ಬೆಳೆಯುತ್ತಿದ್ದೇವೆ, "Shining India." ಹೌದು India is shining. What about rural India? ಮೊನ್ನೆ Forbes Global Organisation ಅವರು ಒಂದು ಸರ್ವೆ ಮಾಡಿದ್ದಾರೆ. 793 ಬಿಲಿಯನೇರ್ಸ್‌ನಲ್ಲಿ ಇಂಡಿಯಾ ದೇಶದಲ್ಲಿ 23 ಇದ್ದಾರೆ. Out of that, Karnataka is having 7 Billionaires. We are producing, we are encouraging the Billionaires. "Shining India" ಹೇಗಿದೆ ನೋಡಿ! ಅಮೆರಿಕಾಕ್ಕಿಂತಲೂ ಬಹಳ ಬಿಲಿಯನೇರ್ಸ್ ಇರುವುದು ಇಂಡಿಯಾ ದೇಶದಲ್ಲಿ ! ಲೇಟೆಸ್ಟ್ ಸರ್ವೆ ಪ್ರಕಾರ ಹೆಚ್ಚು ಬಿಲಿಯನೇರ್ಸ್ ಇರುವುದು ಇಂಡಿಯಾ ದೇಶದಲ್ಲೇ. ಅದೇ ಸಂದರ್ಭದಲ್ಲಿ, ಇಡೀ ಜಗತ್ತಿನಲ್ಲೇ ಅತಿ ಹೆಚ್ಚು ಬಡವರು ಇರತಕ್ಕಂಥಾದ್ದು . . .

ಶ್ರೀ ಎಸ್. ರಾಜೇಂದ್ರನ್: ಕರ್ನಾಟಕ ರಾಜ್ಯದಲ್ಲಿ 7 ಬಿಲಿಯನೇರ್ಸ್ ಇದ್ದಾರೆಂದು ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಹೇಳಿದರು. ಅವರು ಕರ್ನಾಟಕದಲ್ಲಿರುವುದಕ್ಕೆ ನಾವು ಸಂತೋಷಪಡಬೇಕು. 7 ಬೆಗ್ಗರ್ಸ್ ಇದ್ದರೆ ತಾನೇ ಫೈಟ್ ಮಾಡಬೇಕು !

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ Forbesನವರು ಯಾವಾಗ ಇಷ್ಟು ಸಂಖ್ಯೆಯಲ್ಲಿ ಬಿಲಿಯನೇರ್ಸ್ ಇದ್ದಾರೆಂದು ರಿಪೋರ್ಟ್ ಮಾಡಿದ್ದನ್ನು ಕಂಡು ನಮ್ಮ ದೇಶದ, ರಾಜ್ಯದ ಎಲ್ಲಾ ಆಡಳಿತಗಾರರು ಖುಷಿಪಡುತ್ತಿದ್ದಾಗಲೇ, ಅತ್ತ ಅದೇ ದಿವಸ ಆಂಧ್ರಪ್ರದೇಶದಲ್ಲಿ ಹತ್ತಿ ಬೆಳೆದ 15 ಜನ ರೈತರು ಆತ್ಮಹತ್ಯೆ ಮಾಡಿಕೊಂಡರು! The same day, i.e., on 13th March 2006. ರಿಪೋರ್ಟ್ ಅನೌನ್ಸ್ ಮಾಡಿದ ದಿವಸವೇ, 13 Peasants have committed suicide in Andhra Pradesh. This is Rural India, i.e., Shining India. ನಾವು ಯಾವ ಕಡೆ ಗಮನಕೊಟ್ಟಿದ್ದೇವೆ, ಹೇಳಿ? Rural India shine ಆಗುವುದಕ್ಕೆ ಕಾರ್ಯಕ್ರಮ ಇಲ್ಲವೆಂದು ನಾವು ಕೇಳುತ್ತಿದ್ದೇವಷ್ಟೇ, ಬೇರೇನೂ ಅಲ್ಲ. ನಮಗೆ ಅದರ ಬಗ್ಗೆ ವಿರೋಧವಿಲ್ಲ. ಬಿಲಿಯನೇರ್ಸ್ ಮೇಲೆ ನಮ್ಮ ಸಿಟ್ಟು ಇಲ್ಲ, ಕೋಪ ಇಲ್ಲ. ಬಿಲಿಯನೇರ್ಸ್ ಲಿಸ್ಟ್ ಮಾಡಿದ್ದಾರೆ, ಓದಬೇಕೆಂದರೆ, ನಾನು ಓದುತ್ತೇನೆ. ಆ ಬಿಲಿಯನೇರ್ಸ್ ಬೆಳೆಯುತ್ತಿದ್ದಾರೆಂದು ನೋಡಿಕೊಂಡು ಖುಷಿ ಪಟುಕೊಳ್ಳಬೇಕೇ ಅಥವಾ ಹಳ್ಳಿಗಾಡಿನ ಜನರು ಕುಡಿಯುವ ನೀರು ಇಲ್ಲದೇ ಸಾಯುತ್ತಿದ್ದಾರೆ ಮಾಡುವುದಕ್ಕೆ ಕೆಲಸ ಇಲ್ಲದೆ ಸಾಯುತ್ತಿದ್ದಾರೆಂದು ದುಃಖ ಪಟ್ಟುಕೊಳ್ಳಬೇಕೇ? ಇದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ಪರಿಹರಿಸುವುದಕ್ಕೆ ಕಾರ್ಯಕ್ರಮ ರೂಪಿಸಬೇಕಾಗಿರತಕ್ಕಂಥವರು ಯಾರು ಎನ್ನುವುದು ಇನ್ನೊಂದು ಪ್ರಶ್ನೆ. ಯಾರು ಕಾರ್ಯಕ್ರಮ ರೂಪಿಸಬೇಕೋ ಅವರು ಆ ಕಾರ್ಯಕ್ರಮವನ್ನು ರೂಪಿಸಲಿಲ್ಲ. ಹಾಗಾದರೆ, ನಾವು ಈಗ ಏನು ಮಾಡಬೇಕೆಂಬುದನ್ನು ನೀವೇ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಉಪಾಧ್ಯಕ್ಷರೆ, ಗ್ರಾಮೀಣ ಬಡವರ ಸ್ಥಿತಿಗಿಂತಲೂ ನಗರ ಪ್ರದೇಶದಲ್ಲಿರುವವರ ಸ್ಥಿತಿ ಇವೊತ್ತು ತೀರಾ ಗಂಭೀರವಾಗಿದೆ. ಗ್ರಾಮೀಣ ಜನರಿಗೆ ಹೋಲಿಸಿಕೊಂಡರೆ ಪಟ್ಟಣದ ಬಡವರು ಅವರಿಗಿಂತಲೂ ಬಡವರಾಗಿದ್ದಾರೆ. ಇವೊತ್ತು ಒಂದು ಕೆ.ಜಿ ಹೆಸರುಬೇಳೆಗೆ 54 ರೂಪಾಯಿಗಳು, ತೊಗರಿಬೇಳೆಗೆ 60 ರೂಪಾಯಿಗಳು. ಅಕ್ಕಿ ಒಂದನ್ನು ಸಬ್ಸಿಡೈಸ್ ನೀವು ಮಾಡುತ್ತಿದ್ದೀರಿ. ಬಡವ ಎಂಬುವವನು ಗಂಜಿ ಕುಡಿದುಕೊಂಡು ಬದುಕಬೇಕು, ಸಾರು ಕುಡಿಯುವಂತಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, entire pulse growth in Karnataka staggered ಅದು ಇಲ್ಲದಂತಾಗಿದೆ, ಅದಕ್ಕಾಗಿ ಕಾರ್ಯಕ್ರಮ ಇಲ್ಲ. ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುವವರನ್ನು ಕೇಳುವವರಿಲ್ಲ pulse and oil seeds ಗಳ ಮಟ್ಟ ಈ ರೀತಿ ಆಗಿದೆ. Economic Survey ತೆಗೆದು ಓದಿ. ಒಂದು ಕೆ.ಜಿ ಹೆಸರುಬೇಳೆಗೆ 54 ರೂಪಾಯಿ ಕೊಟ್ಟು ತೆಗೆದುಕೊಂಡು ಯಾರಾದರೂ ತಿನ್ನುವುದಕ್ಕಾಗುತ್ತದೆಯೇ? ಅದೇ ರೀತಿ ಒಂದು ಕೆ.ಜಿ ತೊಗರಿಬೇಳೆಗೆ 60–62 ರೂಪಾಯಿ ಕೊಟ್ಟು ಯಾರಾದರೂ ತೆಗೆದುಕೊಂಡು ತಿನ್ನುವುದಕ್ಕಾಗುತ್ತದೆಯೇ? ಅಕ್ಕಿ ಕೊಡುವ ಒಂದು ಕಾರ್ಯಕ್ರಮ ಹಾಕಿಕೊಂಡರೆ, ಊಟ ಕೊಡುವವರು ಯಾರು?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ತೊಗರಿಬೇಳೆ ಒಂದು ಕೆ.ಜಿಗೆ 60 ರೂಪಾಯಿ ಬೆಲೆಯಾಗಿದೆಯೆಂದು ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಆದರೆ, ಆ ಬೆಲೆ ತೊಗರಿಬೇಳೆ ಬೆಳೆಯುವ ರೈತರಿಗೆ ಸಿಗುತ್ತಿಲ್ಲ. ತೊಗರಿಬೇಳೆ ಬೆಳೆಯುವ ರೈತ

ಈಗ ಕಷ್ಟದಲ್ಲಿದ್ದಾನೆ, ನಷ್ಟದಲ್ಲಿದ್ದಾನೆ. ಆದರೆ, ಪ್ರತಿ ಕ್ವಿಂಟಾಲ್‌ಗೆ ಆತನಿಗೆ ಕೇವಲ 2 ಸಾವಿರ ರೂಪಾಯಿ ಕೂಡ ಸಿಕ್ಕುವುದಿಲ್ಲ. ಅದರಲ್ಲಿ ಲಾಭ ಮಾಡುವವರು ವ್ಯಾಪಾರಸ್ಥರು ಮತ್ತು Dhal Mill Owners ಎಂಬುದನ್ನು ನಾವು ಮರೆಯಬಾರದು. ಅದಕ್ಕೋಸ್ಕರ, ಒಬ್ಬ ರೈತನಿಗೆ ಎಲ್ಲಾ ಕಡೆಯಿಂದಲೂ ನಷ್ಟವಾಗುತ್ತಿದೆ. ರೇಟ್ ಜಾಸ್ತಿ ಇಲ್ಲ, ರೈತರಿಗೆ ಸಿಗುತ್ತಿಲ್ಲ, ಎಲ್ಲವೂ ವ್ಯಾಪಾರಿಗಳಿಗೆ ಹೋಗುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ರೈತರಿಗೆ ಸಬ್ಸಿಡೈಸ್ ಮಾಡಿದ್ದರೆ, ಆತ ಫಲ್ಸ್ ಬೆಳೆಯುತ್ತಿದ್ದ ಎಂದು ನಾವು ವಾದ ಮಾಡುತ್ತಿದ್ದೇವೆ. ಆದರೆ, ಯಾವುದೇ ಕಾರ್ಯಕ್ರಮ ಸಬ್ಸಿಡೈಸ್ ಆಗಲಿಲ್ಲ. ಯಾವ ಕಾರ್ಯಕ್ರಮಕ್ಕೂ ಒತ್ತು ಕೊಡಲಿಲ್ಲ. ಇದರಿಂದಾಗಿ ಬೆಳೆಯುವುದಕ್ಕೆ ಅವನಿಗೆ ಆಸಕ್ತಿ ಇಲ್ಲ. ಇವೊತ್ತು ಊರಿನಲ್ಲಿ ಬೆಳೆಯುವುದಕ್ಕೆ ಅವನಿಗೆ ಕೂಲಿ ವರ್ಕ್‌ಔಟ್ ಆಗುವುದಿಲ್ಲ. ಹೆಸರು ಗಿಡ ಹಾಕಿ ಅದನ್ನೂ ಕೀಳಿಸಲಾಗಿದೆ. ಕೂಲಿ ಹಣ ಸಿಗದಿದ್ದರೆ, ಆತ ಅಲ್ಲಿ ಏಕೆ ಬೆಳೆಯುತ್ತಾನೆ? ಬೆಂಗಳೂರಿನಲ್ಲಿ ಅಥವಾ ಕರ್ನಾಟಕದಲ್ಲಿ ಒಂದು ಕೆ.ಜಿ ಹೆಸರುಬೇಳೆಗೆ 54 ರೂಪಾಯಿಗಳಾಗಿದೆ. ನಾವು ಯಾವ ದೇಶದಲ್ಲಿ ಬದುಕಿದ್ದೇವೆ ಎಂದು ಯೋಚನೆ ಮಾಡಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್: ಈಗ ಹೆಸರುಬೇಳೆ, ಅಕ್ಕಿ, ತೊಗರಿಬೇಳೆ ಒಂದೆಡೆ ಇರಲಿ. ನಿಶ್ಚಿಂತೆಯಿಂದ ಇರೋಣವೆಂದರೆ, ಯಡಿಯೂರಪ್ಪನವರೇ, ಮದ್ಯಪಾನದ ಬೆಲೆಯೂ ಜಾಸ್ತಿಯಾಗಿದೆ. ಸಿಕ್ಕಾಪಟ್ಟೆ ಜಾಸ್ತಿಯಾಗಿದೆ, ಹಂಗಿಂಗಾಗಿದೆ ಎಂದು ನೀವು ತಿಳಿದುಕೊಳ್ಳಬೇಡಿ.

ಶ್ರೀ ಹೆಚ್.ಡಿ. ಬಸವರಾಜ್: ವಾಟಾಳ್ ನಾಗರಾಜ್‌ರವರೆ, ನಿಮಗೆ ಅದರ ಬಗ್ಗೆ ಯಾವಾಗ ಗಮನಕ್ಕೆ ಬಂತು?

ಶ್ರೀ ವಾಟಾಳ್ ನಾಗರಾಜ್: ಬಹಳ ಜನರಿಗೆ ಕಷ್ಟವಾಗಿದೆ. ಮದ್ಯಪಾನದ ಮೇಲೆ, ಕರ್ನಾಟಕದಲ್ಲಿರುವ ಸುಮಾರು ಕೋಟ್ಯಾಂತರ ಜನರು ನಿಮಗೆ ತೆರಿಗೆ ಕೊಡುತ್ತಿದ್ದಾರೆ. ಬಹಳ ಮುಗ್ಧ ಜನರು, ಅವರದ್ದೂ ಸಿಕ್ಕಾಪಟ್ಟೆ ಏರಿಕೆಯಾಗಿದೆ. ಅದರ ಬಗ್ಗೆ ತಾವು ಸ್ವಲ್ಪ ಚಿಂತನೆ ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸನ್ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಜನಪರವಾದ ಬಜೆಟ್, 'ಬೊಂಬಾಟ್ ಬಜೆಟ್ ಎಂದು ಒಂದು ಪತ್ರಿಕೆಯಲ್ಲಿ ವರದಿಯಾಗಿದೆ. ಏನು ಸರ್ ಬೊಂಬಾಟ್? 'ಬೊಂಬಾಟ್ ' ಎಂದರೆ ಏನೆಂಬುದು ನಮಗೆ ಅರ್ಥವಾಗಲಿಲ್ಲ. ನಾವು ಸಂವಿಧಾನದ ಪರಿಚ್ಛೇದ 175 ಮತ್ತು 176ರಲ್ಲಿ ಚರ್ಚೆ ಮಾಡಿದ್ದನ್ನು 'ಬೌದ್ಧಿಕ ದಿವಾಳಿಕೋರತನದ ಪ್ರದರ್ಶನ'ವೆಂದು Editorialನಲ್ಲಿ ಬರೆದರು. ಮತ್ತೆ ಇದನ್ನು ' ಬೊಂಬಾಟ್ ಬಜೆಟ್ ' ಎಂದು ಬರೆದರು. ಬೊಂಬಾಟ್ ಬಜೆಟ್ ಎನ್ನಲು ಏನಿದೆ ಸ್ವಾಮಿ? ನಮಗೆ ಅದರ ಬಗ್ಗೆ ಅವರು ಪಾಠ ಹೇಳಿದರೆ ಕೇಳುತ್ತೇವೆ.

ಶ್ರೀ ಎಸ್. ರಾಜೇಂದ್ರನ್: ವಿಸ್ಕಿ ಬೆಲೆ ಇನ್‌ಕ್ರೀಸ್ ಮಾಡಿದ್ದಾರಲ್ಲಾ, ಅದನ್ನು ಇಟ್ಟುಕೊಂಡು ಬೊಂಬಾಟ್ ಬಜೆಟ್ ಎಂದು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕೃಷಿ ರಂಗಕ್ಕೆ ನೀರು ಇಲ್ಲ, ಹಳ್ಳಿಗಾಡಿನ ಬಡವರಿಗೆ ಉದ್ಯೋಗವಿಲ್ಲ, ಇದು ಬೊಂಬಾಟ್ ಬಜೆಟ್ !

ಶ್ರೀ ಹೆಚ್.ಡಿ. ಬಸವರಾಜ್: ಬರೀ ಇದರ ಬಗ್ಗೆಯೇ ಮಾತನಾಡುತ್ತಿದ್ದೀರಲ್ಲಾ, ಅದು ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದೀರಲ್ಲಾ, ಏಕೆ ಈ ತರಹ ಎಂಬುದು ನನಗರ್ಥವಾಗುತ್ತಿಲ್ಲ. ನಿಮ್ಮ ಚಿಂತನೆ ಬರೀ ಅದರ ಬಗ್ಗೆಯೇ ಹೋಗಿದೆ. ಮದ್ಯಪಾನ ಕಡಿಮೆ ಮಾಡಬೇಕೆಂಬುದರ ಬಗ್ಗೆ ಚಿಂತನೆ ಮಾಡುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಮಾತನಾಡುವಾಗ ಅದರ ಬಗ್ಗೆ ಹೇಳಿ.

ಶ್ರೀ ಕೆ. ವೆಂಕಟೇಶ್: ಪತ್ರಿಕೆಯವರು ಬರೆದದ್ದು ಸರಿ ಇಲ್ಲವೆಂದು ಹೇಳುತ್ತಿದ್ದೀರಾ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಹೌದು, ಸರಿ ಇಲ್ಲವೆಂದು ಹೇಳುತ್ತಿದ್ದೇವೆ. ಪತ್ರಿಕೆಯವರು ಬರೆದದ್ದು ಸರಿಯಿಲ್ಲವೆಂದು ಹೇಳುತ್ತಿದ್ದೇವೆ. ಪತ್ರಿಕೆಯವರು ತಪ್ಪು ಬರೆದಿದ್ದಾರೆ. ಇದು ರೈತ ವಿರೋಧಿ ಬಜೆಟ್.

ಶ್ರೀ ಹೆಚ್.ಡಿ. ಬಸವರಾಜ್: ನಿಮ್ಮ ಕಾಳಜಿ ಸಾಮಾನ್ಯ ಜನರಿಗಿಂತಲೂ ಬರೀ ಮದ್ಯದ ಬಗ್ಗೆಯೇ ಆಗಿಹೋಗಿದೆಯಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೋಡಿ, ಬೊಂಬಾಟ್ ಬಜೆಟ್‌ನಲ್ಲಿ ವೇತನ ಪಾವತಿಗೆ 6 ಸಾವಿರ ಕೋಟಿ ರೂಪಾಯಿಗಳು. ಅದು ಈಗ ಹಾಗೇ ಮುಂದುವರೆಯುತ್ತದೆ. Employment opportunity ಜಾಸ್ತಿಯಾಗಿದ್ದರೆ ತಾನೇ ಅದು service charges ನಲ್ಲಿ ಬರುತ್ತದೆ. ಅದು ಬೊಂಬಾಟ್ ಬಜೆಟ್. ಬಡ್ಡಿ ಪಾವತಿಗೆ 4,366 ಕೋಟಿ ರೂ. ಇದ್ದುದು, ಈಗ 4,028-94 ಕೋಟಿ ರೂಪಾಯಿಗಳಷ್ಟು ಬಡ್ಡಿ ಕಟ್ಟಬೇಕು. ಸಾಲ ತಂದಿರುವುದಕ್ಕೆ ಇಷ್ಟು ಹಣ ಕಟ್ಟಬೇಕು. ಈಗ ಸಾಲ ಎಷ್ಟಿದೆ ಎಂದರೆ, ಕರ್ನಾಟಕದ ಒಟ್ಟು ಸಲ ನಾನು ಹೇಳುತ್ತಿರುವ ಲೆಕ್ಕ ಅಲ್ಲ, ನಿಮ್ಮ ಪ್ಲಾನಿಂಗ್ ಕಮಿಷನ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಲೆಕ್ಕದ ಪ್ರಕಾರ 40 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಇದೆ. ಈ ಬೊಂಬಾಟ್ ಬಜೆಟ್‌ನಲ್ಲಿ ! ಯಾರು ಮಾಡಿದರೋ ನಮಗೆ ಗೊತ್ತಿಲ್ಲ. ಯಾರು ಮಾಡಿದರೂ ಇದೇ ಪರಿಸ್ಥಿತಿ. 40 ಸಾವಿರ ಕೋಟಿ ರೂಪಾಯಿಗಳ ಸಾಲ ಇದೆ. ಇದು ಬೊಂಬಾಟ್ ಬಜೆಟ್!? ಕರ್ನಾಟಕ ರಾಜ್ಯದ ಎಲ್ಲಾ ಜನರನ್ನು ಸಾಲಗಾರರನ್ನಾಗಿ ಮಾಡಿರತಕ್ಕಂಥದ್ದು ಬೊಂಬಾಟ್ ಬಜೆಟ್! ಅದರ ಜೊತೆಗೆ ವಿತ್ತೀಯ ಕೊರತೆ, ಅಂದರೆ Financial deficit. Deficit Finance 2001 ರಲ್ಲಿ 4219 ಕೋಟಿ 20 ಲಕ್ಷ ರೂಪಾಯಿಗಳು ಇದ್ದದ್ದು, 2006-07ಕ್ಕೆ 5210 ಕೋಟಿ ರೂಪಾಯಿಗಳಿಗೆ ಬಂದಿದೆ. ಇದು ಬೊಂಬಾಟ್ ಬಜೆಟ್! ಬೊಂಬಾಟ್ ಬಜೆಟ್‌ನಲ್ಲಿ 5210 ಕೋಟಿ ರೂಪಾಯಿಗಳ Financial Deficit ಇದೆ. ನಾವು ಇದನ್ನು ಬೊಂಬಾಟ್ ಬಜೆಟ್ ಎಂದು ಕರೆಯಬೇಕು! ನಾವು ಬಡ್ಡಿ ಪಾವತಿಗೆ 4360 ಕೋಟಿ ರೂಪಾಯಿಗಳನ್ನು ಕೊಡಬೇಕು. ಆದರೆ ಇವತ್ತು ನಾವು 4028 ಕೋಟಿ ರೂಪಾಯಿಗಳನ್ನು ವಾಪಸ್ಸು ಕೊಡಬೇಕು. ಅಸಲು ಪಾವತಿ 2246 ಕೋಟಿ 17 ಲಕ್ಷ ರೂಪಾಯಿಗಳನ್ನು ಕೊಡಬೇಕು. ಇದನ್ನು ನಾನು ಹೇಳುತ್ತಿರುವುದಲ್ಲ. ಈ ಲೆಕ್ಕವನ್ನು ಮಾನ್ಯ ಯಡಿಯೂರಪ್ಪನವರು ಹೇಳಿರುವಂಥದ್ದು. ವಿದ್ಯುತ್ subsidy 1800 ಕೋಟಿ ರೂಪಾಯಿಗಳು ಇದ್ದದ್ದು, 1750 ಕೋಟಿ ರೂಪಾಯಿಗಳಿಗೆ ಬಂದಿದೆ. ಆದರೆ, ದುರಂತ ಏನೆಂದರೆ, ಮಾನ್ಯ ಖರ್ಗೆಯವರು ಮಾತನಾಡುವಾಗ ಹೇಳುತ್ತಾರೆಂದು ಅಂದುಕೊಂಡಿದ್ದೆ. ಒಂದೇ ಒಂದು Mega Watt ವಿದ್ಯುತ್ ಅನ್ನು ಹೊಸದಾಗಿ ಉತ್ಪಾದನೆ ಮಾಡಲಿಕ್ಕೆ ಈ ಬಜೆಟ್‌ನಲ್ಲಿ ಕಾರ್ಯಕ್ರಮವಿಲ್ಲ. This is called Bombat Budget! ಒಂದೇ ಒಂದು Mega Watt ವಿದ್ಯುತ್ ಅನ್ನು ಹೊಸದಾಗಿ ಉತ್ಪಾದನೆ ಮಾಡಲಿಕ್ಕೆ ಒಂದು ಪೈಸಾದ ಕಾರ್ಯಕ್ರಮ ಇಲ್ಲದೇ ಇರತಕ್ಕಂಥದ್ದು, ಬೊಂಬಾಟ್ ಬಜೆಟ್ ಅಂತೆ! ಬೊಂಬಾಟ್ ಬಜೆಟೋ ಬೊಂಬಡ ಬಜೆಟೋ ನನಗೆ ಗೊತ್ತಾಗುತ್ತಿಲ್ಲ. ವಿದ್ಯುಚ್ಛಕ್ತಿ ರಂಗದಲ್ಲಿ ಇವತ್ತು ನೀವೇ ನಮಗೆ ಹೇಳುತ್ತಿದ್ದೀರಿ, Required power is minimum 6 thousand Million Units ನಮಗೆ

ಬೇಕು ಎಂದು ನಮ್ಮ Production ಇವತ್ತು ಎಷ್ಟು? ಇನ್ನೂ 3,700, 3,800 Million Units ನಲ್ಲಿ round ಹೊಡೆಯುತ್ತಿದ್ದೇವೆ. ನಮ್ಮ requirement 6000 Million Units ಬೇಕೆಂದು ನೀವೇ ಹೇಳುತ್ತಿದ್ದಿರಿ. ಇದಕ್ಕೆ ಏನು ಕಾರ್ಯಕ್ರಮವನ್ನು ನಿಮ್ಮ ಬೊಂಬಾಟ್ ಬಜೆಟ್‌ನಲ್ಲಿ ಹಾಕಿಕೊಂಡಿದ್ದೀರಿ? ಒಂದೇ ಒಂದು Mega Watt ವಿದ್ಯುತ್ ಅನ್ನು ಹೊಸದಾಗಿ ಉತ್ಪಾದನೆ ಮಾಡಲಿಕ್ಕೆ ಹಣ ಕೊಡದೆ ಇದ್ದದ್ದನ್ನೇ ಅದಕ್ಕೆ ಇದಕ್ಕೆ ಕೊಟ್ಟು ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ನೀವು ಗಮನ ಕೊಟ್ಟಿಲ್ಲ ನಾನು ಹೇಳುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯವನ್ನು ಕೈಗಾರೀಕರಣ ಮಾಡಬೇಕು, ವಿದೇಶಿ ಬಂಡವಾಳ ಹರಿಯಬೇಕು, ದೊಡ್ಡ ದೊಡ್ಡ ಕಾರ್ಖಾನೆಗಳು ಬರಬೇಕು, ಅವರಿಗೆ ನೀರು ಬೇಕು, ವಿದ್ಯುಚ್ಛಕ್ತಿ ಬೇಕು, ಭೂಮಿ ಬೇಕು, ನೀವು ಕೊಡಬೇಕಾಗಿರುವುದಕ್ಕೆಲ್ಲಾ ವಿರೋಧ ಇಲ್ಲವೆಂದು ನೀವೇ ಒಂದು ಕಡೆ ಹೇಳುತ್ತೀರಿ. ಅವುಗಳನ್ನು ಕೊಡಲಿಕ್ಕೆ ಮಾತ್ರ ಏನೂ ಕಾರ್ಯಕ್ರಮಗಳಿಲ್ಲ. ಇದನ್ನು ಒಂದು ಬೊಂಬಾಟ್ ಬಜೆಟ್ ಎಂದು ನಾವು ಕರೆಯಬೇಕೇ? ಹೇಳಿ. ಇವತ್ತು ಕೃಷಿ ರಂಗದಲ್ಲಿ ಬಹಳ ಮುಖ್ಯವಾದ ಭಾಗ ಅದು ಯಾವುವುವೆಂದರೆ, ಪಶುಸಂಗೋಪನೆ, ರೇಷ್ಮೆ, ತೋಟಗಾರಿಕೆ, ಮೀನುಗಾರಿಕೆ ಮುಂತಾದವು. ಇದಕ್ಕೆ ಏನೇನು ಮಾಡಿದಿರಿ? ತೋಟಗಾರಿಕೆಗೆ, ಇವತ್ತು ನೀವೊಂದು ಕಡೆ ಹೇಳುತ್ತೀರಿ, "ರೈತರು ಹಾಳಾಗಿಬಿಡುತ್ತಾರೆ, ಭತ್ತ ಬೆಳೆಯಬೇಡಿ, ರಾಗಿ ಬೆಳೆಯಬೇಡಿ" ಎಂದು ಮಾನ್ಯ ಶ್ರೀನಿವಾಸಗೌಡರಂತೂ ಮೊದಲಿನಿಂದಲೂ ಜಪ. ......ನೀರೇ ಇಲ್ಲದಿದ್ದರೆ ಹೆಚ್ಚಿಗೆ ಬೆಳೆಯತಕ್ಕ ಪ್ರಶ್ನೆಯೇ ಇಲ್ಲ. ತೋಟಗಾರಿಕೆ ಬೆಳೆಗಳನ್ನು ಬೆಳೆಯಿರಿ. ನಮ್ಮ ಮಾನ್ಯ ಭೈರೇಗೌಡರು "ಏನಯ್ಯಾ, ನಮ್ಮ ರೈತರು ಯಾವಾಗಲೂ ಖಾಕಿ ಚಡ್ಡಿಯನ್ನೇ ಹಾಕಿಕೊಂಡಿರಬೇಕೇನು? ಅವರು pant ಹಾಕಿಕೊಳ್ಳಬಾರದಾ?" ಎಂದು ಹೇಳುತ್ತಿದ್ದರು. ಅದನ್ನು ನಾವು ಸಂತೋಷಪಡುತ್ತೇವೆ. Export ಮಾಡಬೇಕೆಂದು ಹೇಳುತ್ತಾರೆ, ಯಾವುದಕ್ಕೆ? Export-oriented goods ವಸ್ತುಗಳನ್ನು ಕೃಷಿ ರಂಗದಲ್ಲಿ ಬೆಳೆಯಿರಿ ಎಂದು ಹೇಳುತ್ತಾರೆ. ಏನಾಗಲೀ export. ನಾನು ಹೇಳಬಾರದು. ಸನ್ಮಾನ್ಯ ಅಬ್ದುಲ್ ಕಲಾಂರವರು 11 ಅಂಶಗಳ mission ನಲ್ಲಿ ಕೂಡ ಕನಿಷ್ಟ 8 ಅಂಶಗಳು export-oriented production. ಹಾಗಾದರೆ ಭಾರತ ದೇಶದಲ್ಲಿರತಕಂಥ ಜನ ಏನು ತಿನ್ನಬೇಕು ಸ್ವಾಮಿ? ಎಲ್ಲಾ export ಮಾಡಿ ನಾವೇನು ತಿನ್ನಬೇಕು? ನಾವೇನು ಉಪವಾಸ ಇದ್ದುಬಿಟ್ಟು ಬೇರೆಯವರಿಗೆ ಕೊಟ್ಟುಬಿಡಬೇಕಾ? ಅಲ್ಲಾ, export oriented, export-oriented, export-oriented, ಎಲ್ಲಾ export-oriented goods ಅನ್ನು produce ಮಾಡಿಬಿಟ್ಟು ನಮ್ಮ ದೇಶದ ಜನರಿಗೆ ಏನು ಕೊಡಬೇಕು ಎಂದು ನೀವು ಹೇಳುತ್ತಿದ್ದೀರಿ? ಕರ್ನಾಟಕ ರಾಜ್ಯದಲ್ಲಿ export-oriented; ಇವರು ತರಕಾರಿಗಳನ್ನು ಬೆಳೆಯರಿ, ಹೂ ಬೆಳೆಯಿರಿ, ಎಂದು ಹೇಳುತ್ತೀರಿ. ಎಲ್ಲವನ್ನೂ ಬೆಳೆಯೋಣ ಸ್ವಾಮಿ. ಅದನ್ನು ಬೆಳೆದಾಗ ಬೆಳೆದಂಥ ರೈತ ಇವತ್ತು ಏನಾಗಿದ್ದಾನೆ? ತಂಬಾಕು ಬೆಳೆದವನು ಏನಾದ? ಆಲೂಗೆಡ್ಡೆ ಬೆಳೆದವನು ಏನಾದ? ಈರುಳ್ಳಿ ಬೆಳೆದವನು ಏನಾಗಿದ್ದಾನೆ? ಕೊಬ್ಬರಿ ಬೆಳೆದವನು ಏನಾಗಿದ್ದಾನೆ? ಬಾಳೆಹಣ್ಣು ಬೆಳೆದವನು ಏನಾಗಿದ್ದಾನೆ? ಅಡಿಕೆ ಬೆಳೆದವನು ಏನಾಗಿದ್ದಾನೆ? ಏನೋ ಅಡಿಕೆಯವರು ಈಗ ಒಂದು ತಿಂಗಳಿಂದ ಒಂದಷ್ಟು ರೇಟ್ ಬರುತ್ತಿದೆ. ಏನು ಮಾಡಿದಿರಿ? ತೋಟಗಾರಿಕೆ ಬೆಳೆಗಳು ಏನಾಗಿವೆ? ನಮ್ಮ ರೈತರು ಇವತ್ತು ಬೀದಿಗೆ ಬೀಸಾಕುತ್ತಿದ್ದಾರೆ. ಒಂದು ಕಡೆ export-oriented ಬೆಳೆಯಿರಿ ಎಂದು ಹೇಳುತ್ತಾರೆ. Export ಮಾಡಲಿಕ್ಕೆ ಬೇಕಾದಂಥ ಮೂಲಭೂತ ಸೌಲಭ್ಯಗಳನ್ನು ಮಾತ್ರ ಒದಗಿಸುವುದು ಬೇಡ,

ಅಲ್ಲವೇ? Export ಮಾಡುವುದಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಲ್ಲವೇ? ಇವೆಲ್ಲಾ ಮಾಡದೆ ಇದನ್ನು ಒಂದು ಬಜೆಟ್ ಎಂದು ನಾವು ಕರೆಯಬೇಕಂತೆ. ಇದು ಒಂದು ಬಜೆಟಾ? ಬಜೆಟ್ ತಯಾರು ಮಾಡತಕ್ಕಂಥ ಜನರಿಗೆ ಮಾರವಾಡಿಗಳ ತರಹ ಬಡ್ಡಿ ಲೆಕ್ಕ ಹಾಕಿಕೊಂಡು office ನಲ್ಲಿ ಕುಳಿತುಕೊಂಡರೆ ಪ್ರಯೋಜನವಿಲ್ಲ. ಬಜೆಟ್ ತಯಾರಿಸುತ್ತಿರತಕ್ಕಂಥ ಜನ ಮಾರವಾಡಿಗಳ ತರಹ ಲೆಕ್ಕ ಹಾಕಿಕೊಂಡು 15 ಸಾವಿರ ಜನರಿಗೆ ನಾವು permanent ಆಗಿ ಮಾಡಬೇಕಾಗುತ್ತದೆ. ಹೀಗೆ ಏನಾದರೂ ದುಡ್ಡು ಕೊಟ್ಟಬಿಟ್ಟರೆ ಸರ್ಕಾರಕ್ಕೆ loss ಆಗುತ್ತದೆ ಎಂದು ಲೆಕ್ಕ ಹೇಳುವುದಲ್ಲ. ಆ 15 ಸಾವಿರ ಜನ ಬದುಕಲಿಕ್ಕೆ ಬೇಕಾದಂಥ ವ್ಯವಸ್ಥೆ ಮತ್ತು ಕಾರ್ಯಕ್ರಮವನ್ನು ನೀವು ರೂಪಿಸಬೇಕು. ಅವರಿಗೆ ಪರಿಹಾರ ಕೊಟ್ಟರೆ ಸರ್ಕಾರಕ್ಕೆ loss ಆಗುತ್ತದೆ ! ಇವರಿಗೆ ಪರಿಹಾರ ಕೊಟ್ಟರೆ loss ಆಗುತ್ತದೆ, ಅದಕ್ಕೆ subsidy ಕೊಟ್ಟರೆ ಸರ್ಕಾರಕ್ಕೆ loss ಆಗುತ್ತದೆಂದು ಹೇಳುತ್ತೀರಲ್ಲಾ, ಈ ಲೆಕ್ಕ ಹೇಳಲಿಕ್ಕೆ ನೀವು ಅಲ್ಲಿ ಕುಳಿತುಕೊಳ್ಳಬೇಕಾಗಿಲ್ಲ. ನೀವು ಅಲ್ಲಿ ಕುಳಿತುಕೊಳ್ಳ ಬೇಕಾಗಿರತಕ್ಕಂಥದ್ದು ಈ ಅಸಹಾಯಕ ಜನರಿಗೆ, ಈ ಶೋಷಣೆಗೆ ಒಳಗಾಗಿರತಕ್ಕಂಥ ಜನರಿಗೆ, ಕುಳಿತುಕೊಳ್ಳ ಬೇಕಾಗಿರುವಂತ ಜನತಗೆ ದಿನನಿತ್ಯ ದಿವಾಳಿಯಾಗುತ್ತಿರತಕ್ಕಂಥ ರೈತರಿಗೆ ಅವರು ಬದುಕಲಿಕ್ಕೆ ಬೇಕಾಗಿರುವಂಥ ವ್ಯವಸ್ಥೆಯನ್ನು ರೂಪಿಸಲಿಕ್ಕೆ ನೀವು ಅಲ್ಲಿ ಕುಳಿತುಕೊಳ್ಳಬೇಕು. ಲೆಕ್ಕ ಹೇಳಲಿಕ್ಕೆ ನೀವೇ ಬೇಕೇ? ಈಗ computer ಗಳು ಬಂದುಬಿಟ್ಟಿವೆ. ನಿಮ್ಮ ಅಧಿಕಾರಿಗಳು ಕುಳಿತುಕೊಂಡು ಲೆಕ್ಕ ಹೇಳುವ ಅವಶ್ಯಕತೆಯಿಲ್ಲ. Computer ಗೆ feed ಮಾಡಿಬಿಟ್ಟರೆ ಲೆಕ್ಕವೆಲ್ಲಾ ಬಂದುಬಿಡುತ್ತದೆ. ಇದು ಬಜೆಟ್? ಈ ಬಜೆಟ್‌ಗೆ ನಾವು ಬೆಂಬಲ ಕೊಡಬೇಕೇ? ಇದೊಂದು balance sheet? Annual Financial statement prepare ಮಾಡಲಿಕ್ಕೆ ಬರದೇ ಇರತಕ್ಕಂಥ ಸರ್ಕಾರ ಇಲ್ಲಿ ಬಜೆಟ್ ಮಂಡನೆ ಮಾಡುವುದು. ಆ ಮೇಲೆ Annual finance statement ಬಗ್ಗೆ ಇವತ್ತು, ಆ ಬಜೆಟ್ ತಯಾರು ಮಾಡಿದವರು ಹೇಳಲಿ. ಇದರಲ್ಲಿ ಯಾವುದಾದರೂ ಹೊಸ project ಇದೆಯೇ? ಹೊಸ programme ಹಾಕಿದ್ದೀರಾ? ಆದರೆ ಸೈಕಲ್ ಕೊಡವುದನ್ನೇ ನಾವು palliatives ಎಂದು ಹೇಳಿದ್ದು. ಅದು programme ಅಲ್ಲ. It is a palliative. Palliatives ಅಂದರೆ ಏನೋ ಒಂದಷ್ಟು 'ಮೂಗಿಗೆ ತುಪ್ಪ ಒರೆಸತಕ್ಕಂಥ palliatives ಅದು. This budget does not contain any other projcet or programme. ಇದು ಒಂದು ಬಜೆಟಾ? ಇದನ್ನು ಏನೆಂದು ಕರೆಯಬೇಕು? Annual Financial statement ಎಂದು ಕರೆಯಬೇಕೇ? ಆ Annual Financial statement ಅನ್ನು ಕೊಡಲಿಕ್ಕೂ ಸಾಧ್ಯವಿಲ್ಲದೆ ಇವತ್ತು ನೀವು ಬಜೆಟ್ ಅನ್ನು ಮಂಡನೆ ಮಾಡಿದ್ದೀರಿ. ಬಜೆಟ್‌ನಲ್ಲಿ ನೀವು ಮಂಡನೆ ಏನು ಮಾಡಿದ್ದೀರಿ? ಇದಕ್ಕೆ ನೀವು ಈ ಬಜೆಟ್ ಅನ್ನು ಮಂಡನೆ ಮಾಡಿ "ನಾವು ರಾಜ್ಯದ ಜನತೆಗೆ ಏನೇನೋ ಕೊಟ್ಟುಬಿಟ್ಟಿದ್ದೇವೆ, ಏನೇನೋ ಹೇಳಿಬಿಟ್ಟಿದ್ದೇವೆ" ಎಂದು ಹೇಳುತ್ತಾರೆ. ಆದರೆ ಒಂದು ವಿಚಾರ, ಮಾನ್ಯ ಅಧ್ಯಕ್ಷರೆ, ನೀವು ಇಡೀ ಬಜೆಟ್ ಪುಸ್ತಕವನ್ನು ಎಲ್ಲಾದರೂ ತೆಗೆದು ನೋಡಿ. ನಮ್ಮ ಸ್ವಂತ ಉತ್ಪಾದನೆಗೆ ಇಷ್ಟನ್ನು ನಾವು ಗಮನ ಕೊಟ್ಟಿದ್ದೇವೆ ಎಂದು, ಅವರು ಎಲ್ಲಾದರೂ ಒಂದು ಕಡೆಗೆ ತೋರಿಬಿಡಲಿ. "ನಾವು ಸ್ವಂತವಾಗಿ ಇಷ್ಟನ್ನು ಉತ್ಪಾದನೆ ಮಾಡಿದ್ದೇವೆ." ಎಂದು ಎಲ್ಲಿ ತೋರಿಸಿದ್ದೀರಿ? 107ನೇ ಪುಟದಲ್ಲಿ ಜಮೆ, ರೂಪಾಯಿ ಇಷ್ಟು ಭಾಗ ಯಾವುದರಿಂದ ಎಂದು ಹೇಳತಕ್ಕಂಥದ್ದನ್ನು ಅವರು ಕೊಟ್ಟಿದ್ದಾರೆ. ರಾಜ್ಯ ತೆರಿಗೆ ಆದಾಯದಿಂದ 53 ಪೈಸೆ, ಇದು ಯಾವ ತೆರಿಗೆ? Taxable income ಇದು. ಇದು non-taxable income ಅಲ್ಲ. Taxes ಅನ್ನು ನೀವು ಯಾರಿಗೆ ಹಾಕುತ್ತಿದ್ದೀರಿ? Indirect taxes ಇದರಲ್ಲಿ ಎಷ್ಟಿದೆ? Direct taxes ಎಷ್ಟಿದೆ? Who are the victims of the indirect tax? Who will be the victimes of the indirect tax?

What is the percentage in the direct tax? ಯಾರನ್ನು ಬಲಿಪಶು ಮಾಡುವುದಕ್ಕೆ ನೀವು ಹೊರಟಿದ್ದೀರಿ? ಮತ್ತೆ ಅದರಲ್ಲಿ 11 ಪೈಸೆ Central tax ನಿಂದ ಬರುತ್ತದೆ. ಕೇಂದ್ರ ಸರ್ಕಾರದಿಂದ 11 ಪೈಸೆ ಅನುದಾನಗಳಿಂದ ಬರುತ್ತದೆ. ಸಾಲದಿಂದ 6 ಪೈಸೆ ಬರುತ್ತದೆ. ಇನ್ನು ನಿಮ್ಮ ಉತ್ಪಾದನೆ ಏನು? ಹಾಗಾದರೆ ನಿಮ್ಮ ಸ್ವಂತ ಉತ್ಪಾದನೆ ಏನು? ಆ ಬಂಡವಾಳ ಕೂಡ ಇವತ್ತು ಏಕೆ ಬರುತ್ತಿದೆ? ನಿಮ್ಮ planning allocation ಜಾಸ್ತಿಯಾಗಿದೆ. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣದ ಭಾಗ ಹೆಚ್ಚಾಗಿದೆ. ಅದರಿಂದ ನಿಮಗೆ ಹಣ ಸಿಕ್ಕಿದೆ, ಇಲ್ಲದಿದ್ದರೆ ಹಣ ನಿಮಗೆ ಸಿಗುತ್ತಿರಲಿಲ್ಲ. ಆ ಹಣ ಇಲ್ಲದಿದ್ದರೆ, ನಿಮ್ಮ ಹತ್ತಿರ ಹಣ ಇಲ್ಲ. ಅವರು ಕೊಟ್ಟಿರತಕ್ಕಂಥ ಹಣದಲ್ಲೇ ನೀವು ಸರಿ ಮಾಡುತ್ತಿದ್ದೀರಿ. Revenue expenditure increase ಮಾಡುತ್ತಾ ಹೋಗಿದ್ದೀರಿ. ಹೇಗೆ ಈ ಅರ್ಥ ವ್ಯವಸ್ಥೆಯನ್ನು ನೀವು ತೂಗಿಸುತ್ತೀರಿ? ಯಾವ ರೀತಿಯಲ್ಲಿ ಇದನ್ನು ತೂಗಿಸಲಿಕ್ಕೆ ಸಾಧ್ಯವಿದೆ? ಕೈಗಾರಿಕಾ ರಂಗ . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಒಂದು ಮಾಹಿತಿ ಪ್ರಕಾರ 1 ರೂಪಾಯಿಯನ್ನು ಜನರಿಗೆ ತಲುಪಿಸಲಿಕ್ಕೆ 4 ರೂಪಾಯಿಗಳನ್ನು ತಾವು ಖರ್ಚು ಮಾಡುತ್ತಿದ್ದೀರಿ To pass-on one Rupee from Government to a poor man, we are spending 4 Rupees from the administration. ಕೇಂದ್ರ ಸರ್ಕಾರದ ಅಂಕಿ ಅಂಶಗಳ ಪ್ರಕಾರ, ನಮ್ಮ ಸ್ಟೇಟ್‌ನಲ್ಲಿ it is 5 Rupees. We have the highest tax, 10 and odd percent tax ಇರುವವರು. ಸರ್ಕಾರದ ಒಂದು ರೂಪಾಯಿ ದುಡ್ಡನ್ನು ಒಬ್ಬ ಮನುಷ್ಯನಿಗೆ ತಲುಪಿಸಬೇಕೆಂದರೆ, ಮಧ್ಯೆ 5 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದನ್ನೇನಾದರೂ cut down ಮಾಡಲಿಕ್ಕೆ ಯೋಚನೆ ಮಾಡಲಿಕ್ಕೆ ಯೋಚನೆ ಮಾಡಬೇಕಲ್ಲವೇ? The administrative cost has to come down.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದನ್ನು ಹೇಗೆ ಕಡಿಮೆ ಮಾಡಬೇಕು ಎಂಬ ಬಗ್ಗೆ ಸಲಹೆ ಕೊಡಿ.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ: ಹೇಗೆ ಕಡಿಮೆ ಮಾಡಬೇಕು ಎಂದರೆ, 10 ಕೋಟಿ ರೂಪಾಯಿಗಳ project ಅನ್ನು ಉದ್ಘಾಟನೆ ಮಾಡಲಿಕ್ಕೆ . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಸಾರ್ ತಾವು ಮಾಡಬಹುದಾಗಿತ್ತು. ಎಲ್ಲಾ works ಅನ್ನೂ schedule time ನಲ್ಲಿ ಮುಗಿಸಬೇಕಾಗಿತ್ತು. Cost of escalation reduce ಮಾಡಬೇಕಾಗಿತ್ತು. Project 36 ವರ್ಷಗಳಾಗುತ್ತವೆ ಎಂದು ಏನಿದೆಯೋ, ಅವುಗಳು ಆಯಾ ವರ್ಷಕ್ಕೆ ಮುಗಿಯ ಬೇಕಾಗಿತ್ತು. ಸೈಟ್ Compensation ಕಂಟ್ರಾಕ್ಟರ್‌ಗೆ reduce ಆಗಬೇಕಾಗಿತ್ತು. ಇವತ್ತು ಸಿಮೆಂಟ್ ಕ್ವಾಸ್ ಬಗ್ಗೆ ಹೇಳುವುದಾದರೆ, ನಮ್ಮ ಟೈಮ್‌ನಲ್ಲೇ ಮುಗಿಸಿದ್ದರೆ, 135 ರೂಪಾಯಿಗಳಿಗೆ ಮುಗಿಯ ಬೇಕಾಗಿದ್ದ ಸಿಮೆಂಟ್ ಕಾಸ್ಟ್ ಇವತ್ತು 210 ರೂಪಾಯಿಗಳಿಗಾದರೂ ಸಿಗುತ್ತಿಲ್ಲ. ಕರ್ನಾಟಕದಲ್ಲಿ ಯಾವುದೇ project schedule timeಗೆ ಮುಗಿಯುತ್ತಿಲ್ಲ. ಕರ್ನಾಟಕದಲ್ಲಿ ಯಾವುದೇ ಸೈಟನ್ನು ನೀವು ಕಂಟ್ರಾಕ್ಟರ್‌ಗೆ ಅವನು ವರ್ಕ್ start ಮಾಡುವ ದಿವಸ clear ಮಾಡಿ ಕೊಟ್ಟಿಲ್ಲ. Do you know how much compenstion Karnataka is giving to outside contractors who come for package? ನೀವು ಕೇಷಿಸ್ ಕೆಲಸವೊಂದರಲ್ಲೇ ರಷ್ಯನ್

ಕಂಪೆನಿಯವನು ಬಂದು ಎಷ್ಟು ದಿವಸ ಇಲ್ಲಿ ಡಿಲೇ ಮಾಡಿ ಹೋದ, ಅವನಿಗೆ ನೀವು ಹಾಕಿರುವ ದಂಡ ಎಷ್ಟು? State ಗೆ ಆಗಿರುವ Loss ಎಷ್ಟು ಎಂಬುದನ್ನು ಸ್ವಲ್ಪ ತೆಗೆಸಿ ನೋಡಿ ಸಾರ್. You have to complete the project in time as per schedule, that is the suggestion. ಎರಡನೆಯದು, ಸ್ಯಾಲರಿಯನ್ನು ತಾವು ನಮ್ಮ ರೈತರಿಗೆ ನೋಡಿಬಿಟ್ಟು ಆಲೋಚನೆ ಮಾಡಿ fix ಮಾಡಬೇಕು. ಇವತ್ತು ಯಾರೂ ಸಂಬಳ ಕಡಿಮೆಯಾಗಿದೆ ಎಂದು ಊಟ ಬಿಟ್ಟು ಮಲಗಿರಲಿಲ್ಲ. ಅವನಿಗೆ cost of index ನೋಡಿಕೊಂಡು ಸಂಬಳ ಜಾಸ್ತಿ ಮಾಡುತ್ತೀರಿ, ನಮಗೆ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡಿಕೊಂಡು ಬಂದಿದ್ದೀರಿ. ಒಬ್ಬ ಮನುಷ್ಯ ನಮ್ಮ ಜೊತೆಗೆ market ನಲ್ಲಿ compete ಮಾಡುವುದಕ್ಕಾಗದೆ, ಇವತ್ತು agriculture or labour ಆಗಿರುವಂತಹ ಮನುಷ್ಯ; that has to be reduced. ಅಲ್ಲಿ cost of index ಪ್ರಕಾರ T.A ಕೊಡುತ್ತೀರಿ, DA ಜಾಸ್ತಿ ಮಾಡುತ್ತೀರಿ. production orient ಮಾಡಿಕೊಂಡು ನಮಗೂ ಕೊಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ತಾವು project report ಮಾಡುವಾಗ, manual ನಲ್ಲಿ calculate ಮಾಡಿ ಒಂದು project estimate ಮಾಡುತ್ತೀರಿ. ಆದರೆ Machine use ಮಾಡುತ್ತಾರೆ. ಈಗ ಎಷ್ಟು below tender ಹಾಕುತ್ತಾರೆ ಎನ್ನುವುದನ್ನು ನೋಡಬೇಕಾಗುತ್ತದೆ. 1997ರಲ್ಲಿ ಕೆಲವು projects ಪ್ರಾರಂಭವಾದರೆ, 2002ಕ್ಕೆ complete ಆಗುತ್ತದೆ. ಅದರ ಮೇಲೆ ಕಂಟ್ರಾಕ್ಟರ್‌ಗೆ ಮಧ್ಯದಲ್ಲಿ ಯಾವುದೋ ಕಾರಣಕ್ಕೆ ನಿಂತರೆ, ಅವನಿಗೆ advance ಕೊಟ್ಟಿದ್ದರೆ interest pay ಮಾಡುತ್ತೀರಿ. ಅವನಿಗೆ ಬೇಗ ಮುಗಿಸಿದ್ದಕ್ಕೆ bonus ಸಹ ಕೊಡುತ್ತೀರಿ. ಇದೆಲ್ಲಾ ಹಿಂದೆ ಆಗಿರುವುದನ್ನು ನೀವು ತೆಗೆಸಿ ನೋಡಿ. ಆಗ ಹೇಗೆ ಕಡಿಮೆ ಮಾಡಬೇಕು ಎಂಬುದು ನಿಮಗೆ ಗೊತ್ತಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಾರ್, ತಾವು ಈ ಪ್ಯಾಕೇಜ್‌ಗಳನ್ನು ರಿವ್ಯೂ ಮಾಡಬೇಕು. ತಾವು ಈ ಕಡೆಗೆ ಇದ್ದಾಗ ಅದರ ಬಗ್ಗೆ ಬಹಳ ಮಾತನಾಡುತ್ತಿದ್ದಿರಿ. ತಾವು ಪ್ಯಾಕೇಜ್ ಏನು ಕೊಟ್ಟಿದ್ದೀರಿ, ರೋಡ್, ಅದು ಇದು ಎಂದು, 40–60% margin ಅವತ್ತು ಕೊಟ್ಟಿದ್ದೀರಿ. Pre-qualification ಎಂದು fix ಮಾಡಿ, ಆಂಧ್ರದವನಿಗೆ, ತಮಿಳುನಾಡಿನವನಿಗೆ, ಮಹಾರಾಷ್ಟ್ರದವನಿಗೆ ತಂದು ಇಲ್ಲಿ ಕೆಲಸ ಮಾಡಲಿಕ್ಕೆ ಪ್ಯಾಕೇಜ್ ಕೊಟ್ಟು, ಇಲ್ಲಿ ಯಾವ ಸಣ್ಣ ಪುಟ್ಟ ಕಂಟ್ರಾಕ್ಟರ್ ಮಾಡುತ್ತಿದ್ದವನಿಗೆ ತೆಗೆದು ಹಾಕಿದ್ದೀರಿ. ಇದರ ಬಗ್ಗೆ ಏನಾಗಿದೆ ಎಂಬುದನ್ನು ತಾವು ಸ್ವಲ್ಪ ತರಿಸಿ ನೋಡಬೇಕು. If at all, you are really interested, ಆ ಪ್ಯಾಕೇಜ್ programmes ಅನ್ನು first review ಮಾಡಿ ಎಷ್ಟು ಹಣ ಲೂಟಿಯಾಗಿದೆ ಆ ರೋಡ್‌ಗಳಲ್ಲಿ, ಆ worksಗಳಲ್ಲಿ ಎಂಬುದನ್ನು ನೋಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಕ್ಕೆ ಇನ್ನೊಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಒಂದು ರೂಪಾಯಿ ಒಬ್ಬ ಮನುಷ್ಯನಿಗೆ ತಲುಪಿಸ ಬೇಕಾದರೆ, 4 ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ, ಅದನ್ನು ಕಡಿಮೆ ಮಾಡಿ ಎಂದು ಅವರು ಹೇಳಿದರು. ಇನ್ನೊಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ಸರ್ಕಾರ ಪಾರದರ್ಶಕವಾಗಿ ಇರಬೇಕು ಎಂದು ಒಂದು ಕಾನೂನು ಮಾಡಿದೆ. 10 ಸಾವಿರ ರೂಪಾಯಿಗಳ ಮೇಲೆ ಇರತಕ್ಕಂಥ ಎಲ್ಲಾ ಕೆಲಸಗಳಿಗೂ tender ಹಾಕಬೇಕಂತೆ. ಪಾರದರ್ಶಕ ಇರಲಿಕ್ಕೆ ಹೀಗೆ ಮಾಡಬೇಕಂತೆ. ಒಬ್ಬನು 18% less ಹಾಕುತ್ತಾನೆ . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಅಷ್ಟೇ ಅಲ್ಲ. 13% tax ಸಹ ಇದೆ ಅದರ ಜೊತೆಗೆ royalty ಬೇರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದನ್ನೇ ನಾನು ಹೇಳುತ್ತಿದ್ದೇನೆ. 10 ಸಾವಿರ ರೂಪಾಯಿಗಳ ಕೆಲಸಕ್ಕೆ 12%–18% less ಹಾಕುತ್ತಾನೆ, ಅದರ ಜೊತೆಗೆ ಅವನು 10% tax ಕಟ್ಟಬೇಕು, royalty ಕಟ್ಟಬೇಕು. ಅದೆಲ್ಲಾ ಕಟ್ಟಿ, ಹೋಗಿ, 10 ಸಾವಿರ ರೂಪಾಯಿಗಳಲ್ಲಿ ಎಷ್ಟು ಜನರಿಗೆ ಉಳಿಯುತ್ತದೆ ಎಂದು ಲೆಕ್ಕ ಹೇಳಿ ಸ್ವಾಮಿ. ಅವನು ಹಾಕಬೇಕಾದರೆ 12%–18% less ಹಾಕುತ್ತಾನೆ. 13% tax ಅದರ ಜೊತೆಗೆ ಅವನು royalty ಕಟ್ಟಬೇಕು. ಇವೆಲ್ಲಾ ಹೋಗಿ, 10 ಸಾವಿರ ರೂಪಾಯಿಗಳ ಕೆಲಸವನ್ನು implement ಮಾಡುವಾಗ, ಜನಕ್ಕೆ ಎಷ್ಟು ಸ್ವಾಮಿ ಉಳಿದಿರುತ್ತದೆ? ಅವನ ಲಾಭ ಇಲ್ಲಿ ಹೇಳಿದರೆ ಎಲ್ಲಾ ಬಯಲಿಗೆ ಬರುತ್ತದೆ . . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದರ ಜೊತೆಗೆ ಅವನಿಗೆ sleeping partners ಇರುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇಲ್ಲಿ ಲೆಕ್ಕ ಹೇಗಿದೆ ಎಂದರೆ, 10 ಸಾವಿರ ರೂಪಾಯಿಗಳಿಗೆ minimum tender ಹಾಕಬೇಕು, ಇದಕ್ಕೇನಾದರೂ ಅರ್ಥವಿದೆಯೇ? ಇದೇನು ತೊಘಲಕ್ ದರ್ಬಾರೇ? ಹೇಗಿದು? 10 ಸಾವಿರದ ಮೇಲೆ ಇದ್ದರೆ ಎಲ್ಲಾ ಟೆಂಡರ್ರೇ. 13% tax ಮತ್ತು ರಾಯಲ್ಟಿ ಕಟ್ಟಿ ಅವನಿಗೆ ಏನು ಉಳಿಯುತ್ತದೆ? . . . .

ಶ್ರೀ ಎಂ.ಪಿ. ವೆಂಕಟೇಶ್: ಹೆಗ್ಡೆಯವರೆ, ಇದೆಲ್ಲಾ ಈಗ ನಿಮಗೆ ನೆನಪಿಗೆ ಬರುತ್ತಿದೆ......

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರು ಸಲಹೆ ಕೇಳಿದ್ದಕ್ಕೇ ನಾವು ಹೇಳಿದ್ದೇವೆ ಸ್ವಾಮಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಭಾಷಣ ಮಾಡುವಾಗ ಸಲಹೆಗಳನ್ನು ಹೇಳಿದರೆ ಸರಿ. ಆದರೆ ಭಾಷಣ ಮಾಡುವಾಗಲೆಲ್ಲಾ ಬರೀ ಬಯ್ಯುತ್ತೀರಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವಲ್ಲ, ಅವರೇ ಸಲಹೆಗಳನ್ನು ಕೇಳಿದ್ದು.

(ಗೊಂದಲ)

ಶ್ರೀ ಅಂಜನಮೂರ್ತಿ: .... ಸ್ವಲ್ಪ ಯೋಚನೆ ಮಾಡಿ. ನಿಮ್ಮಲ್ಲೂ ಪಂಚಾಯಿತಿಗಳಿವೆ. 10 ಸಾವಿರ ರೂಪಾಯಿಗಳಿಗೆ ಕಂಟ್ರಾಕ್ಟರ್ ಏನು ಕೆಲಸ ಮಾಡಲಿಕ್ಕೆ ಆಗುತ್ತದೆ? ಆ ಮೊತ್ತದಿಂದ ಕೆಲಸಗಳಾಗುತ್ತವೆಯೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಯವರು): ಏನು ಬಹಳ ಪ್ರಮುಖವಾದ ವಿಷಯಗಳನ್ನು ನನ್ನ ಗಮನಕ್ಕೆ ತರುತ್ತಿದ್ದೀರಿ. ಇದನ್ನು ಈ ಸದನ, ನಾವು ಬಹಳ ಗಂಭೀರವಾಗಿ ಪರಿಗಣಿಸಬೇಕು. ನಾನು ಹಾಗೆಯೇ ಅಂಕಿ ಅಂಶಗಳನ್ನು ನೋಡುತ್ತಿದ್ದೇನೆ. ಒಂದೂವರೆ ತಿಂಗಳಿನಿಂದ ನಾನು ಹಣಕಾಸಿನ ಸಚಿವನಾಗಿ ಈ ಅಂಕಿ ಅಂಶಗಳ್ನು ನೋಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ, ನಾವು ಶೇಕಡ 20–22 ಭಾಗ ಸಹ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಿಕ್ಕೆ

ಆಗದಿರುವಂತಹ ಒಂದು ಪರಿಸ್ಥಿತಿ ಇದೆ. ಅದಲ್ಲದೆ ಬಹಳ ದೊಡ್ಡ ಪ್ರಮಾಣದಲ್ಲಿ ಮಧ್ಯವರ್ತಿಗಳ ಪಾಲಾಗುತ್ತಿದೆ. ಇದನ್ನು ನೋಡಿದಾಗ, ಇದೇ ರೀತಿ ಮುಂದುವರಿದರೆ, ನಿಜವಾಗಿಯೂ ಸಹ ರಾಜ್ಯದ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯವೇ ಎಂದು ಅನುಮಾನ ಬರುವಂತಹ ಪರಿಸ್ಥಿತಿ ಉಂಟಾಗುತ್ತದೆ. ಇದರ ಬಗ್ಗೆ ಎರಡು ಮಾತಿಲ್ಲ. ಎಲ್ಲಾದರೂ ಒಂದು ಕಡೆ ಇದಕ್ಕೆ ಕಡಿವಾಣ ಹಾಕಬೇಕಾಗುತ್ತದೆ. ಇದನ್ನು ಬಿಗಿಗೊಳಿಸಲಿಕ್ಕೆ ಕ್ರಮ ತೆಗೆದುಕೊಂಡು, ಮುಂದೆ ಹೆಜ್ಜೆ ಇಡಬೇಕಾಗುತ್ತದೆ. ಅದಕ್ಕೆ ನಾನೇನು ಯೋಚನೆ ಮಾಡುತ್ತಿದ್ದೇನೆ ಎಂದರೆ, ಅದನ್ನು ನಾನು ಬಜೆಟ್‌ಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುತ್ತೇನೆ. ಪ್ರತಿ ಮೂರು ತಿಂಗಳಿಗೊಮ್ಮೆ ನಾವೇನು ಕಾರ್ಯಕ್ರಮಗಳಿಗೆ, worksಗೆ ಎಂದು allocation ಮಾಡಿದ್ದೇವೋ, ಏನು ಪ್ರಗತಿಯಾಗಿದೆ ಅದು ಎಷ್ಟರ ಮಟ್ಟಿಗೆ ಜನರಿಗೆ ತಲುಪಿದೆ? ಅದು ರೂಪಾಯಿಯಲ್ಲಿ ನಾಲ್ಕಾಣಿ ಭಾಗವಾದರೂ ಸರಿಯೇ, ಅದು ಆ ಜನಕ್ಕೆ ತಲುಪಿದೆಯೇ? quality work ಆಗಿದೆಯೇ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ನೀವೇನು ನಾವು ರಸ್ತೆಗಳಿಗೋಸ್ಕರ ಕಂಟ್ರಾಕ್ಟ್ ಕೊಟ್ಟು ಮಾಡಿಕೊಂಡು ಹೋಗುತ್ತಿದ್ದೇವೋ, ಎಲ್ಲಿ ಏನು ಮಾಡುತ್ತಿದ್ದಾರೆ ಎಂದು ಲೆಕ್ಕ ಬುಕ್ ಇಲ್ಲ. ಅದರ ಬಗ್ಗೆ ಯಾವುದೇ ಬಿಗಿ ಇಲ್ಲ, control ಇಲ್ಲ. control ಇಲ್ಲ. ಅದರ ಬಗ್ಗೆ ಯಾವುದೇ ಅನುಮಾನ ಬೇಡ. ನೀವು ಹೇಳುತ್ತಿರುವಂತಹ ಮಾತುಗಳನ್ನು, ಈ ಸರ್ಕಾರದಲ್ಲಿ ಇದ್ದುಕೊಂಡು, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದಕ್ಕೆ ಬಿಗಿ ತರುವುದಕ್ಕೆ ಖಂಡಿತವಾಗಿ ನಾವು ಕ್ರಮಗಳನ್ನು ತೆಗೆದುಕೊಳ್ಳುವವರಿದ್ದೇವೆ. ಯಾವುದೇ ಮುಲಾಜಿಗೆ ನಾನು ಒಳಗಾಗುವುದಿಲ್ಲ. ನಾವು ಇದರ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳಬೇಕು. ನಾವು ಜನರ ಪ್ರತಿನಿಧಿಗಳಾಗಿ ಇಲ್ಲಿ ಕುಳಿತಿದ್ದೇವೆ, ಜನ ಕೊಟ್ಟಂತಹ ತೆರಿಗೆ ಹಣದಲ್ಲಿ ಶೇಕಡ 75ರಷ್ಟು ಭಾಗ, ಸಾಲ–ಸೋಲ, ಸರ್ಕಾರಿ ನೌಕರರ ಸಂಬಳ, ಸಾರಿಗೆ, pension ಇದಕ್ಕೇ ಹೊರಟು ಹೋದರೆ, ರಾಜ್ಯದ ಅಭಿವೃದ್ಧಿ ಆಗುವುದು ಯಾವಾಗ? ನೂರಕ್ಕೆ ಎಪ್ಪತ್ತು ಜನರಿರುವ ಗ್ರಾಮೀಣ ಜನತೆ ನೆಮ್ಮದಿಯಿಂದ ಬದುಕುವುದು ಯಾವಾಗ? ಇದರ ಬಗ್ಗೆ ಹಗಲು–ರಾತ್ರಿ ನಾವು ಚಿಂತನೆ ಮಾಡುತ್ತಿದ್ದೇವೆ. ಅದನ್ನು ಎರಡು ರೀತಿ ನಾವು ಮಾಡಬೇಕಾಗುತ್ತದೆ. ಮೊದಲನೆಯದಾಗಿ, ಸೋರಿ ಹೋಗುತ್ತಿರುವುದನ್ನು ಬಿಗಿ ಮಾಡಿ ಸರ್ಕಾರದ ಬೊಕ್ಕಸವನ್ನು ತುಂಬಬೇಕು. ಇನ್ನೊಂದು ಕಡೆ, quarterly ಒಂದು ಸಾರಿ review ಮಾಡಿ, ಅದನ್ನು ಪ್ರಗತಿಯತ್ತ ಕೊಂಡೊಯ್ಯುವುದು. ನಾವು ನಿಮ್ಮ ಜೊತೆಗೆ ಚರ್ಚೆ ಮಾಡುತ್ತೇವೆ. ಅದರ ಬಗ್ಗೆ ಸದನದಲ್ಲೇ ಮಾಡೋಣ. ಅಧಿವೇಶನದಲ್ಲಿ ನೀವೇನು ಸಲಹೆಗಳನ್ನು ಕೊಟ್ಟಿದ್ದೀರೋ, ಅದರ ಬಗ್ಗೆ ಮೂರು ತಿಂಗಳಿಗೊಮ್ಮೆ ಚರ್ಚೆ ಮಾಡೋಣ. ಅಧಿವೇಶನದಲ್ಲಿ ನೀವೇನು ಸಲಹೆಗಳನ್ನು ಕೊಟ್ಟಿದ್ದೀರೋ, ಅದರ ಬಗ್ಗೆ ಮೂರು ತಿಂಗಳಿಗೊಮ್ಮೆ ಚರ್ಚೆ ಮಾಡಿ, ಏನು ಕೊಟ್ಟಿದ್ದೇವೆ, ಏನು ಪ್ರಗತಿಯಾಗಿದೆ, ಎಷ್ಟರಮಟ್ಟಿಗೆ ಅದು ತಲುಪಿದೆ ಇದರ ಬಗ್ಗೆ ಇಲ್ಲಿ ಚರ್ಚೆಗೆ ನಾನು ಸಿದ್ಧನಿದ್ದೇನೆ. ಚರ್ಚೆ ಮಾಡಿ ಮುಲಾಜಿಲ್ಲದೆ ಬಿಗಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿಧಾನಸೌಧದಲ್ಲಿ ಕುಳಿತಿರುವಂತಹ ನಮ್ಮ ಅಧಿಕಾರಿಗಳು ಯಾರು ಏನೇ ಬೇಜಾರು ಮಾಡಿಕೊಳ್ಳಲಿ, ತಿಂಗಳಿಗೆ ಎರಡು ದಿವಸವಾದರೂ ಅವರು ಜಿಲ್ಲೆಗಳಿಗೆ ಹೋಗಬೇಕು. ಆ ತಾಲ್ಲೂಕಿನಲ್ಲಿ ನಮ್ಮ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಅನುಷ್ಠಾನವಾಗಿದೆ ಎಂಬುದನ್ನು ನೋಡಬೇಕು. ಅದಕ್ಕಾಗಿಯೇ ನಾವು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸರ್ಕಾರಿ ನೌಕರರಿಗಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದ್ದರಿಂದ ನಿಮ್ಮ ಸಲಹೆಯನ್ನು ನೂರಕ್ಕೆ ನೂರು ನಾನು

ತಲೆಬಾಗಿ ಒಪ್ಪಿಕೊಳ್ಳುತ್ತೇನೆ. ಅದನ್ನು ಸರಿ ಮಾಡುವುದಕ್ಕೆ ನಾವೆಲ್ಲ ಕುಳಿತುಕೊಂಡು ಚಿಂತನೆ ಮಾಡೋಣ. ಇಲ್ಲಿ ಪಕ್ಷಭೇದದ ಯಾವುದೇ ಪ್ರಶ್ನೆ ಇಲ್ಲ. ಒಟ್ಟಾಗಿ, ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ನಿಮ್ಮ ಸಲಹೆ ಸೂಕ್ತವಾಗಿದೆ. ಅದನ್ನು ಚರ್ಚೆ ಮಾಡುವುದಕ್ಕೆ, ಅದಕ್ಕೆ ಪರಿಹಾರ ಕಂಡು ಹಿಡಿಯುವುದಕ್ಕೆ ನಾನಂತೂ ಸಿದ್ಧನಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ತಾವು ತಮ್ಮ ಆಯವ್ಯಯದಲ್ಲಿ ಕೊಟ್ಟಂತಹ figures ನಲ್ಲಿ out of Rs.41,850 crores, revenue expenditure ಇರುವುದು Rs.34,340 crores. ಉಳಿದಿದ್ದು ಎಷ್ಟು? ಬೇರೆಯದಕ್ಕೆ 6000–7000 ಸಾವಿರ ಕೋಟಿ ರೂ.ಗಳು.

ಶ್ರೀ ಎಸ್. ಕುಮಾರ ಬಂಗಾರಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸ್ಪೀಡ್ ಆಫ್ ಮಾಡಬೇಕೆನ್ನತಕ್ಕಂತಹ ವಾದವನ್ನು ಮಂಡಿಸಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈಗಾಗಲೇ, ಮಾರ್ಚ್ ಎರಡನೇ ತಾರೀಖು ನೀವು ಒಂದು ಹೊಸ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೀರಿ. ಐದು ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ತಂದಿರುವಂತಹ ಗ್ರಾಮೀಣ ಯೋಜನೆಗಳಿಗೆ ಕೊಡುವಂತಹ ಕೂಲಿಯನ್ನು ಚೆಕ್ ಮುಖೇನ ವಿತರಣೆ ಮಾಡಬೇಕೆಂದು ಆರ್‌ಡಿಪಿಆರ್‌ನಿಂದ ಆರ್ಡರ್ಸ್ ಬಂದಿದೆ. ಬರತಕ್ಕಂತಹ ದಿನನಿತ್ಯದ ಕೂಲಿಯನ್ನು ಚೆಕ್ ಮುಖೇನ ಕೊಡುವುದಾದರೆ, ಎಂಪ್ಲಾಯ್‌ಮೆಂಟ್ ಪ್ರೋಗ್ರಾಂ ಹೇಗೆ ಸಕ್ಸಸ್‌ಫುಲ್ ಆಗಿ ಮಾಡುವುದಕ್ಕೆ ಸಾಧ್ಯ? ಬೇಸಿಕ್ ಆಗಿ ಒಂದು ಕಾರ್ಯಕ್ರಮ ಅನುಷ್ಠಾನ ಆಗ ಬೇಕಾದರೆ, 10,000 ರೂಪಾಯಿಗೆ ಟೆಂಡರ್ ಕರೆಯುವುದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ.

Sri J.C. Madhuswamy: It has to be with drawn. ಆಳುಗಳಿಗೆ ನೀವು ಚೆಕ್ ಕೊಡಿ ಎಂದರೆ ಆಗುವುದಿಲ್ಲ. ಲೇಬರ್ ಲೆಕ್ಕ ಮಾಡಿ ಮೆಷಿನ್‌ನಲ್ಲಿ ಕೆಲಸ ಮಾಡುವುದರಿಂದ 30 ರಿಂದ 40 ಪರ್ಸೆಂಟ್ ದುಡಿಯುತ್ತಿದ್ದಾರೆ. ರೆಗ್ಯುಲರೈಸ್ ಮೆಷಿನ್, ವರ್ಕ್ nothing will happen. ಈ ಕಳ್ಳಾಟದ ನಾಟಕಕ್ಕೆ ತಲೆ ಬಾಗಬೇಡಿ. ಎಲ್ಲರೂ ಜೆಸಿಬಿ ಮತ್ತು ಹಿಟಾಚಿ ಯಂತ್ರಗಳನ್ನು ಇಟ್ಟುಕೊಂಡೇ ಕೆಲಸ ಮಾಡುತ್ತಿರುವುದು. ಹಳ್ಳಿಗಳಲ್ಲಿ ಯಾವ ಕೆಲಸಗಳಿಗೂ ಲೇಬಲ್ ಸಿಗುವುದಿಲ್ಲ. ಪ್ರಾಕ್ಟಿಕಲಿ ನಾವು ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ದುಡ್ಡನ್ನು ಕೊಡಲಾರದ್ದಕ್ಕೆ ಈ ವ್ಯವಸ್ಥೆ ಮಾಡಬೇಕಾಗುತ್ತದೆ ಅಷ್ಟೆ.

ಶ್ರೀ ಎಸ್. ಕುಮಾರ ಬಂಗಾರಪ್ಪ: ಕೂಲಿಯನ್ನು ಚೆಕ್ ಮುಖೇನ ಕೊಡುವುದಾದರೆ ಯಾವ ನಿಟ್ಟಿನಲ್ಲಿ ಕಾರ್ಯಕ್ರಮ ಅನುಷ್ಠಾನ ಆಗುವುದಕ್ಕೆ ಸಾಧ್ಯ ಇದೆ?

ಶ್ರೀ ಅಪ್ಪಾಜಿ ಎಸ್. ನಾಡಗೌಡ: ಮಾನ್ಯ ಉಪಾಧ್ಯಕ್ಷರೆ, ಒಂದು ಯೋಚನೆ ಮಾಡುವಾಗ ಅದರ ಹಿಂದೆ ಇರತಕ್ಕಂತಹ ವಿಚಾರ ಏನಿದೆ, ಅದು ಬಹಳ ಒಳ್ಳೆಯ ವಿಚಾರ. ಆದರೆ ಪ್ರಾಕ್ಟಿಕಲ್ ಇಂಪ್ಲಿಮೆಂಟೇಷನ್ ಕೂಡ ನಾವು ಮಿಸ್‌ಯೂಸ್ ಯಾವ ರೀತಿ ಆಗುತ್ತಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಇಲ್ಲಿ ಚೆಕ್ ಮುಖಾಂತರ ಕೊಡತಕ್ಕಂಥದ್ದು ಮಾಡುವುದರಿಂದ, ಅಲ್ಲಿ ಪುನಃ ಬೋಗಸ್ ಅಕೌಂಟ್‌ಗಳು ಬ್ಯಾಂಕುಗಳಲ್ಲಿ ಪ್ರಾರಂಭವಾಗುತ್ತವೆ. ಇದು ಶಾಶ್ವತ. ಮತ್ತೊಂದು ನಿಜವಾಗಿ ಯಾರು ಅಲ್ಲಿ ಹೋಗಿ ಕೂಲಿ ಮಾಡುತ್ತಾರೆ ಅವನು ಹೋಗಿ ಬ್ಯಾಂಕಿಗೆ ಅಲಿಯಬೇಕಾದರೆ ಅವನಿಗೆ ಮಿನಿಮಮ್ ಅಕೌಂಟ್ ಓಪನ್ ಮಾಡುವುದಕ್ಕೆ ಎಷ್ಟೊಂದು ತೊಂದರೆಯಾಗುತ್ತದೆ. ಈ ಎರಡನ್ನೂ

ನಾವು ವಿಚಾರ ಮಾಡಬೇಕಾಗುತ್ತದೆ. ಕಳ್ಳನ ಮನಸ್ಸು ನಮಗಿಂತ ಹೆಚ್ಚಿನ ವೇಗದಲ್ಲಿ ಓಡುತ್ತಿರುತ್ತದೆ. ಯಾರು ಕಳ್ಳತನ ಮಾಡುವವನಿದ್ದಾನೆ, ಅವನು ಕಳ್ಳತನ ಮಾಡಲಿಕ್ಕೆ ಏನು ಅನುಕೂಲ ಬೇಕು ಅದನ್ನು ಸೃಷ್ಟಿ ಮಾಡಿಕೊಳ್ಳುತ್ತಾನೆ. ಅದಕ್ಕೋಸ್ಕರ ಇದು ತಾತ್ವಿಕವಾಗಿ ಬಹಳ ಒಳ್ಳೆಯದು. ಆದರೆ ಇದನ್ನು ಇಂಪ್ಲಿಮೆಂಟ್ ಮಾಡುವುದು ಬಹಳ ಕಷ್ಟ. ಅದರ ಬಗ್ಗೆ ವಿಚಾರ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ನಾನು ಆಗಲೇ, this budget doen't contain any projects or programmes. ಎಂದು ಹೇಳಿದೆ. ಆದರೆ palliatives ಆದ್ರೂ ಕೊಟ್ಟಿದ್ದೀರಿ, ನೀವು, ಕೈಗಾರಿಕಾ ವಿಕಾಸ ಯೋಜನೆ 2005-06ರಲ್ಲಿ ಇದ್ದುದ್ದು 10 ಕೋಟಿ ರೂಪಾಯಿಗಳು ನಾವು ಏನೋ ಹೆಚ್ಚು ಮಾಡುತ್ತಿದ್ದೇವೆಂದು ಹೇಳಿದರು. ಆದರೆ 2006-07ರ ನಿಮ್ಮ ಬಜೆಟ್‌ನಲ್ಲಿ ಕೈಗಾರಿಕಾ ವಿಕಾಸ ಯೋಜನೆಗೆ ಎಂಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದರಿಂದ ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಮಾಡುತ್ತೀರಾ? 2005-06ರಲ್ಲಿ 10 ಕೋಟಿ ರೂ. ಕೊಟ್ಟರು, 2006-07ಕ್ಕೆ ಎರಡು ಕೋಟಿ ರೂ. ಕಡಿಮೆ ಮಾಡಿ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವರು ಕೈಗಾರಿಕೆ ಡೆವಲಪ್‌ಮೆಂಟ್ ಮಾಡುತ್ತೇವೆಂದು ಹೇಳುತ್ತಾರೆ. ಇದು ಬೊಂಬಾಟ್ ಬಜೆಟ್. ಹೊಸ ಕೈಗಾರಿಕೆಗಳ ಸ್ಥಾಪನೆಗೆ 2005-06ರಲ್ಲಿ 420 ಕೋಟಿ ರೂಪಾಯಿಗಳು ಇತ್ತು. ಈಗ ಎಷ್ಟು ಕೊಟ್ಟಿದ್ದೀರಿ, ಒಂದು ರೂಪಾಯಿ ಸಹ ಜಾಸ್ತಿ ಮಾಡಿಲ್ಲ. ಸುಧಾರಿತ ಸರಕುಗಳ ಸಹಾಯ ಧನ ಮೂರು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಗಣಿ ಶೋಧನೆ ಪ್ರಯೋಗಾಲಯಕ್ಕೆ 2.80 ಕೋಟಿ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಬಿಸ್‌ನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇದೆ. ಅವರು ಬರಲೇ ಬೇಕು. ನಾಳೆ ಮುಗಿಸಲಿ.

ಉಪಾಧ್ಯಕ್ಷರು: ಮುಗಿಸಿ ಬಿಡಲಿ ಇನ್ನೇನು? ಇನ್ನು ಐದು ನಿಮಿಷದಲ್ಲಿ ಮುಗಿಸಿ. ಬಿಎಸಿ ಮೀಟಿಂಗ್ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ನಾಳೆ ಮುಂದುವರೆಸುತ್ತೇನೆ. ನಾನೂ ಬಿಎಸಿಗೆ ಹೋಗಬೇಕು, ಅವರೂ ಬಿಎಸಿಗೆ ಹೋಗಬೇಕು. ನಾಳೆ ಮಾತನಾಡುತ್ತೇನೆ.

ಉಪಾಧ್ಯಕ್ಷರು: ಇನ್ನೊಂದು ಹತ್ತು ನಿಮಿಷದಲ್ಲಿ ಮುಗಿಸಿ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸನ್ಮಾನ್ಯ ಉಪಾಧ್ಯಕ್ಷರೆ, ಪಶು ಸಂಗೋಪನೆಗೆ 2005-06ರಲ್ಲಿ 12.25 ಕೋಟಿ ರೂಪಾಯಿ ಕೊಟ್ಟಿದ್ದರು, ಈಗ ಎಷ್ಟು ಕೊಟ್ಟಿದ್ದಾರೆ ಗೊತ್ತಾ; ಎಲ್ಲವೂ ಸೇರಿ 22 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಔಷಧಿ, ಪಶು ವೈದ್ಯರ ನೇಮಕ, ದೇಶೀ ತಳಿ ಅಭಿವೃದ್ಧಿ ಇವೆಲ್ಲವೂ ಸೇರಿ ಅಷ್ಟು ಕೊಟ್ಟಿದ್ದಾರೆ. ಸಹಕಾರದ ಬಗ್ಗೆ ನಾನು ಆಗಲೇ ಹೇಳಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಲಭ್ಯವಾಗುತ್ತಿಲ್ಲ. ಅದಕ್ಕೆ ಹಣ ಇನ್‌ಕ್ರೀಸ್ ಮಾಡಲಿಕ್ಕೆ ತಯಾರಿಲ್ಲ. ಗ್ರಾಮೀಣ ಪ್ರದೇಶಗಳಿಗೆ ಡಾಕ್ಟರ್‌ಗಳು ಹೋಗುವುದಿಲ್ಲ. ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ. ಆಸ್ಪತ್ರೆಗಳನ್ನು ಕ್ಲೀನ್ ಮಾಡಲಿಕ್ಕೆ ಜನ ಇಲ್ಲ. ಮಾನ್ಯ ಉಪಾಧ್ಯಕ್ಷರೆ, ನಿಮಗೊಂದು ಉದಾಹರಣೆ ಹೇಳುತ್ತೇನೆ ಇವತ್ತು ಆಸ್ಪತ್ರೆಗಳ ಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಹಿಂದೆ ಡಾ: ಸುಬ್ರಹ್ಮಣ್ಯರವರು ಹೆಲ್ತ್ ಕಮಿಷನರ್ ಆಗಿದ್ದಾಗ ಒಂದು ವ್ಯವಸ್ಥೆ ಜಾರಿಗೆ ತಂದಿದ್ದರು ಕ್ಲೀನಿಂಗ್ ಮಾಡುವುದಕ್ಕೆ ಕಾಂಟ್ರ್ಯಾಕ್ಟ್ ಕೊಡುತ್ತಿದ್ದರು. ಒಂದೇ ರೀತಿಯಲ್ಲಿ ಅದು ಚೆನ್ನಾಗಿ ಇತ್ತು ಈಗ ಅಲ್ಲಿ ಕಾಂಟ್ರ್ಯಾಕ್ಟ್ ಪದ್ದತಿ ಹೋಗಿ ಈಗ ಅಲ್ಲಿಯ ಸ್ಟಾಫ್ ಏನಾಗಿದೆ, ಗ್ರೂಪ್ "ಡಿ"ಯವರ

ಸಂಬಳ ಕೊಟ್ಟು ಇನ್ನೂ ಇಬ್ಬರಿಗೆ ಕ್ಲೀನ್ ಮಾಡಲು ನೇಮಕ ಮಾಡಿಕೊಂಡಿದ್ದಾರೆ. ಅವರು ಲ್ಯಾವೇಟರಿಗಳನ್ನು ಕ್ಲೀನ್ ಮಾಡುವುದಿಲ್ಲ. ಆದರೆ ಸಂಬಳ ಕೊಟ್ಟು ಅಷ್ಟು ಜನರಿಗೆ ನೇಮಕ ಮಾಡಿಕೊಂಡಿದ್ದಾರೆ. ಇದರಿಂದ ಆಸ್ಪತ್ರೆಗಳ ಒಳಗಡೆ ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ. ಔಷಧಿಗಳಿಗೆ ಹಣ ಇಲ್ಲ. ಡಾಕ್ಟರ್ಗಳು ಇಲ್ಲ. ಇದಕ್ಕೆ ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ, ನಾನು ಯಾರಿಗೆ ಹೇಳಬೇಕು ಅಧ್ಯಕ್ಷರೆ?

ಉಪಾಧ್ಯಕ್ಷರು: ಐದು ಗಂಟೆಗೆ ಆರ್ಟ್ ಆಫ್ ಲಿವಿಂಗ್ ಫಂಕ್ಷನ್ ಇದೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ರೆಡ್ಡಿಯವರೇ, ತಾವು ದಯವಿಟ್ಟು ಕೆಹೆಚ್ಎಸ್‌ಡಿಪಿ (ಕರ್ನಾಟಕ ಹೆಲ್ತ್ ಸಿಸ್ಟಮ್ ಡೆವಲಪ್‌ಮೆಂಟ್) ಯೋಜನೆ ಯಾವುದು ಇದೆ, ಈ ಪ್ರೋಗ್ರಾಂ ಎಷ್ಟು ವರ್ಸ್ಟ್ ಆಗಿದೆ ಎಂದು ಹೇಳುವುದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿದರೆ ಒಳ್ಳೆಯದು. ಇವತ್ತು ಆ ಸಿಸ್ಟಮ್‌ನ ಅವಶ್ಯಕತೆ ಇದೆಯೇ ಎಂದು ಹೇಳುವಂಥದ್ದು. ಅವರು ಮಾಡಬೇಕಾ, ಪಿಡಬ್ಲ್ಯೂಡಿ ಕಡೆಯಿಂದ ಮಾಡಿಸಬೇಕಾ? ಬೇರೆ ಕಡೆಯಿಂದ ಮಾಡಿಸಬೇಕಾ ಎನ್ನುವುದರ ಬಗ್ಗೆ ತಮಲ್ಲಿ ಮಾಹಿತಿ ಇದ್ದರೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ನಿಮಗೆ ಬಿಟ್ಟಿದ್ದು. ನಾನು ಇಷ್ಟೇ ಮಾಹಿತಿ ಕೊಡುವುದು. ನಾನು ಒಬ್ಬ ಹಳ್ಳಿ ಪ್ರದೇಶದಿಂದ ಬಂದಿರತಕ್ಕಂತಹ ಶಾಸಕ. ನನ್ನ ಆಸ್ಪತ್ರೆಯಲ್ಲಿ ಔಷಧಿ ಇಲ್ಲ, ಡಾಕ್ಟರ್ ಇಲ್ಲ, ಕ್ಲೀನ್ ಮಾಡುವವರು ಇಲ್ಲ, ಅವರು ಬೇಕು ಎಂದು ಅಷ್ಟೇ ನಾನು ಕೇಳುವುದು. ನೀವು ಯಾವ ರೀತಿಯಲ್ಲಿ ಕೊಡುತ್ತೀರಿ, ಹೇಗೆ ಕೊಡುತ್ತೀರಿ, ಯಾವ ಮುಖಾಂತರ ಕೊಡುತ್ತೀರಿ ಅದು ನಮಗೆ ಬೇಕಾಗಿಲ್ಲ. ಯಾರ ಮುಖಾಂತರ ಆದರೂ ನಮಗೆ ಕೊಡಿ ನಮ್ಮದೇನೂ ತಕರಾರು ಇಲ್ಲ. ಆದರೆ ನಿಮ್ಮ ಬೊಂಬಾಟ್ ಬಜೆಟ್‌ನಲ್ಲಿ ಈ ಆರೋಗ್ಯ ಇಲಾಖೆಗೆ ಎಷ್ಟು ಹಣ ಕೊಟ್ಟಿದ್ದೀರಿ? ಹಿಂದಿನ 2004–05ರಲ್ಲಿ ಎಷ್ಟು ಕೊಟ್ಟಿದ್ದೀರಿ, ಈಗ ನೀವು ಎಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ಲೆಕ್ಕ ಹೇಳಿ. ಅದು ಇಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇದೊಂದು ಅನಾಥ ಆಗಿ ಬಿಟ್ಟಿದೆ. ಹಿಂದಿನ ಬಜೆಟ್‌ನಲ್ಲಿ ಅನೌನ್ಸ್ ಮಾಡುತ್ತಿದ್ದರು. ಮುಂದೆ ಬರತಕ್ಕಂತಹ ವರ್ಷದಲ್ಲಿ ಇಷ್ಟು ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ, ಇಷ್ಟು ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆ, ಇಷ್ಟು ಕಡೆ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಈ ಬಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪವೇ ಇಲ್ಲ. ಎಷ್ಟು ಹೈಸ್ಕೂಲ್‌ಗಳನ್ನು ಮಾಡುತ್ತೀರಿ ಎಂಬುದು ಇಲ್ಲ, ಎಷ್ಟು ಪ್ರಾಥಮಿಕ ಶಾಲೆಗಳನ್ನು ಮಾಡುತ್ತೀರಿ, ಅದೂ ಇಲ್ಲ. ಮಿನಿ ವಿಧಾನಸೌಧ 13 ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಮಿನಿ ವಿಧಾನಸೌಧ ಇನ್ನೂ ಹೆಚ್ಚು ಬೇಕು. ಆದರೆ ನಿಮ್ಮ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್‌ನಲ್ಲಿ ಮೂಲಭೂತವಾಗಿ ಬೇಕಾದಂತಹ ಪ್ರಾಥಮಿಕ ಶಿಕ್ಷಣಕ್ಕೆ ನೀವು ಎಷ್ಟು ಹಣ ಖರ್ಚು ಮಾಡುತ್ತಿದ್ದಿರಿ, ಅದರಲ್ಲಿ ಒಂದು ಪರ್ಸೆಂಟ್ ಕಡಿಮೆ ಮಾಡಿದ್ದೀರಿ. ಅಂದರೆ ಬೊಂಬಾಟ್ ಬಜೆಟ್ ಇದು. ಒಂದು ಪರ್ಸೆಂಟ್ ಹಣ ಪ್ರಾಥಮಿಕ ಶಿಕ್ಷಣಕ್ಕೆ ಕಡಿಮೆ ಮಾಡಿ ಕೊಟ್ಟರೆ, ಇದು ಬೊಂಬಾಟ್ ಬಜೆಟ್! ಹಾಗಾದರೆ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ಬಗ್ಗೆ ನಿಮ್ಮ ಕಾನ್‌ಸೆಪ್ಟ್ ಏನು? ನಿಮ್ಮ ಹೈಯರ್ ಎಜ್ಯುಕೇಷನ್‌ಗೆ ಎಷ್ಟು ಕೊಟ್ಟಿರಿ? ಇವತ್ತು ಟೆಕ್ನಾಲಜಿಯಲ್ಲಿ ಫಾಸ್ಟ್ ಛೇಂಜಸ್ ಆಗುತ್ತಿದೆ. ಹಾಗೆ ಫಾಸ್ಟ್ ಆಗಿ ಛೇಂಜ್ ಆಗುತ್ತಿರುವಂತಹ ಟೆಕ್ನಾಲಜಿಗೆ ನಾವು ಏನಾದರು ಕೋಪ್ ಆಫ್ ಮಾಡಬೇಕಾದರೆ ಆ ಹೊಸ ಹೊಸ ಟೆಕ್ನಾಲಜಿಗಳನ್ನು ನಮ್ಮ ಮಕ್ಕಳಿಗೆ

ಹೇಳಿ ಕೊಡಬೇಕಾದರೆ, ನಿಮ್ಮ ಐಟಿಐ, ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಆ ಹೊಸ ಹೊಸ ಟೆಕ್ನಾಲಜಿಯನ್ನು ಮಕ್ಕಳಿಗೆ ಓದಲಿಕ್ಕೆ ಬೇಕಾದಂತಹ ಮೆಥಡಾಲಜಿಯನ್ನು ಆ ವ್ಯವಸ್ಥೆಗೆ ಏನು ಅನುಕೂಲ ಮಾಡಿ ಕೊಟ್ಟಿದ್ದೀರಿ? ಎಷ್ಟು ಹಣ ತೆಗೆದು ಇಟ್ಟಿದ್ದೀರಿ? ಟೆಕ್ನಿಕಲ್ ಎಜ್ಯುಕೇಷನ್‌ಗೆ ಹಣ ಕೊಡಿ ಎಂದರೆ, ನಮ್ಮದು ಪ್ರೆಯಾರಿಟಿ ಪ್ರೈಮರಿ ಎಜ್ಯುಕೇಷನ್ ಎಂದು ಹೇಳುತ್ತೀರಿ. ಪ್ರೈಮರಿ ಎಜ್ಯುಕೇಷನ್‌ಗೆ ಹಣ ಕೊಡಿ ಎಂದರೆ, ನಮ್ಮ ಪ್ರಿಯಾರಿಟಿ ಟೆಕ್ನಿಕಲ್ ಎಜ್ಯುಕೇಷನ್‌ಗೆ ಎಂದು ಹೇಳುತ್ತೀರಿ. ಅದಕ್ಕೂ ಹಣ ಇಲ್ಲ, ಇದಕ್ಕೂ ಹಣ ಇಲ್ಲ. ನೀವು ಗ್ರಾಮೀಣಾಭಿವೃದ್ಧಿಗೆ ಹಣ ತೆಗೆದಿಟ್ಟಿರತಕ್ಕಂಥದ್ದು ಎಷ್ಟು ಪರ್ಸೆಂಟ್? ಮೂರು ಪರ್ಸೆಂಟ್. ಗ್ರಾಮೀಣ ಪ್ರದೇಶದಲ್ಲಿ ಬರತಕ್ಕಂಥ ಜನರ ಸಂಖ್ಯೆ ಎಷ್ಟು? ನೀವು ಅವರಿಗೆ ಹಣ ಬಜೆಟ್‌ನಲ್ಲಿ ತೆಗೆದಿಟ್ಟಿರತಕ್ಕಂಥದ್ದು ಎಷ್ಟು? ಪಟ್ಟಣ ಪ್ರದೇಶದಲ್ಲಿರತಕ್ಕಂಥ ಜನ ಸಂಖ್ಯೆ ಎಷ್ಟು? ಆ ಪಟ್ಟಣ ಪ್ರದೇಶದ ಅಭಿವೃದ್ಧಿಗೆ ತೆಗೆದಿಟ್ಟಿರತಕ್ಕಂಥ ಹಣವೆಷ್ಟು? ಲೆಕ್ಕ ಹೇಳಿ ನಿಮ್ಮ ಬಜೆಟ್‌ನಿಂದ. ಎಷ್ಟು ಪರ್ಸೆಂಟ್ ಖರ್ಚು ಮಾಡುತ್ತಿದ್ದೀರಿ ನೀವು? ಇದನ್ನು ಬೊಂಬಾಟ್ ಬಜೆಟ್, ಜನಪರವಾದ ಬಜೆಟ್ ಎಂದು ನಾವು ಕರೆಯಬೇಕೇ?, ಕರ್ನಾಟಕ ರಾಜ್ಯದ ರೂರಲ್ ಭಾಗಗಳಲ್ಲಿ 80 ಪರ್ಸೆಂಟ್ ಪಾಪ್ಯುಲೇಶನ್ ಇರುವುದು. ಈ 80 ಪರ್ಸೆಂಟ್ ಪಾಪ್ಯುಲೇಶನ್‌ಗಾಗಿ ನೀವು ಎಷ್ಟು ಪರ್ಸೆಂಟ್ ಬಜೆಟ್‌ನಲ್ಲಿ ತೆಗೆದಿಟ್ಟಿದ್ದೀರಿ, ಇನ್ನು 20 ಪರ್ಸೆಂಟ್ ಪಾಪ್ಯುಲೇಶನ್‌ಗಾಗಿ ನೀವು ಎಷ್ಟು ಪರ್ಸೆಂಟ್ ನಿಮ್ಮ ಬಜೆಟ್‌ನಲ್ಲಿ ಹಣ ತೆಗೆದಿಟ್ಟಿದ್ದೀರಿ? ಫ್ಲೋರೈಡ್ ನೀರನ್ನು ಜನರು ಕುಡಿದು ಸಾಯುತ್ತಿದ್ದಾರೆಂದು ನಾವು ಹೇಳಿದೆವು. ಗ್ರಾಮೀಣ ಕುಡಿಯುವ ನೀರಿನ ಯೋಜನಗಾಗಿ ಬಜೆಟ್‌ನಲ್ಲಿ 750 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದರಲ್ಲಿ ನಿಮ್ಮ ಗ್ರ್ಯಾಂಟ್ ಎಷ್ಟು? ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು? 750 ಕೋಟಿ ರೂ. ಕೇಂದ್ರ ಸರ್ಕಾರದ ಹಣ. ನಿಮ್ಮ ಪಾಲೆಷ್ಟು, ನೀವೆಷ್ಟು ಅದಕ್ಕೆ ಕಾಂಟ್ರಿಬ್ಯೂಟ್ ಮಾಡುತ್ತಿದ್ದೀರಿ? ಗ್ರಾಮೀಣ ರಸ್ತೆಗಳಿಗೆ ಸಿ.ಎಂ.ಜಿ.ವೈ. 80 ಕೋಟಿ, ರೂ. ಡಿಸ್ಟ್ರಿಕ್ಟ್ ಪ್ಲಾನ್ 2354 ಕೋಟಿ, ರೂ. ಈಗ 2500 ಕೋಟಿ ರೂ.ಗೆ ಬಂದಿದೆ. ನೂತನ ಪುರ ಯೋಜನೆಗೆ 25 ಕೋಟಿ ರೂ. ಲೆಕ್ಕ ಹಾಕಿ, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು? ರಾಜ್ಯ ಸರ್ಕಾರದ ಪಾಲು ಎಷ್ಟು? ನೀವೆಷ್ಟು ಕೊಡುತ್ತಿದ್ದೀರಿ, ರಾಜ್ಯ ಸರ್ಕಾರದ ಜವಾಬ್ದಾರಿ ಇದರಲ್ಲಿ ಎಷ್ಟಿದೆ, ಎಂದು ಹೋಗಲಿ 750 ಕೋಟಿ ರೂ. ಇದೆ, ಆ 750 ಕೋಟಿ ರೂಪಾಯಿಗಳಲ್ಲಿ ಈ ವರ್ಷದಲ್ಲಿ ನಮ್ಮ ಕರ್ನಾಟಕ ರಾಜ್ಯದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುತ್ತೀರಾ/ ಮಾಡುವುದಕ್ಕೆ ಸಾಧ್ಯ ಉಂಟೇ? ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕಳೆದ ವರ್ಷ ಕುಡಿಯುವ ನೀರಿಗೆ ನನ್ನ ಒಂದೇ ಒಂದು ಬಾಗೇಪಲ್ಲಿ ತಾಲ್ಲೂಕಿನಲ್ಲಿ ಟ್ರಾನ್ಸ್‌ಪೋರ್ಟೇಶನ್ ಆಫ್ ವಾಟರ್‌ಗೆ ಒಂದು ಕೋಟಿ 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಒಂದು ತಾಲ್ಲೂಕಿಗೆ ಟ್ರಾನ್ಸ್‌ಪೋರ್ಟೇಶನ್ ಆಫ್ ವಾಟರ್‌ಗೆ ಇಷ್ಟೊಂದು ಹಣ ಖರ್ಚು ಆಗಿದೆ. ಅಲ್ಲಿಗೂ ಪ್ರಾಬ್ಲಂ ಸಾಲ್ವ್ ಆಗಲಿಲ್ಲ. ಈಗೇನೋ ಲಾಸ್ಟ್ ಈಯರ್ ಸ್ವಲ್ಪ ಮಳೆಯಾಗಿರುವುದರಿಂದ ಸ್ವಲ್ಪ ಸುಧಾರಿಸಬಹುದು. ಆದರೆ ಇದು ಪರ್ಮನೆಂಟ್ ಅಲ್ಲ. ನಮಗೆ ಟ್ರಾನ್ಸ್‌ಪೋರ್ಟೇಶನ್ ಮಾಡಿರತಕ್ಕಂಥ ನೀರಿಗೆ 48 ಲಕ್ಷ ರೂಪಾಯಿಗಳನ್ನು ಇನ್ನೂ ನಮ್ಮ ತಾಲ್ಲೂಕಿಗೆ ಬಾಕಿ ಕೊಡಬೇಕಾಗಿದೆ. ನೀರನ್ನು ಟ್ರಾನ್ಸ್‌ಪೋರ್ಟೇಶನ್ ಮಾಡಿರುವುದು. ಫ್ಲಡ್ ಡ್ಯಾಮೇಜಿದ್ದು ಹಣಕೊಡುತ್ತೇವೆ "ನೀವು ಕೆಲಸ ಮಾಡಿ ಎಂದು ಎಂದು" ಹೇಳಿದಿರಿ. ಫ್ಲಡ್ ಡ್ಯಾಮೇಜ್‌ನಲ್ಲಿ ಕೆಲಸ ಮಾಡಿರತಕ್ಕಂಥವರಿಗೆ ಇವೊತ್ತಿಗೂ ಹಣವನ್ನು ಬಿಡುಗಡೆ ಮಾಡಿಲ್ಲ. ನಮ್ಮ ಜಿಲ್ಲೆಯದೇ ಸುಮಾರು 13 ಕೋಟಿ ರೂಪಾಯಿ ಇದೆ

ನಮ್ಮ ಡಿ.ಸಿ. ಯವರು ಹೇಳುವ ಲೆಕ್ಕದ ಪ್ರಕಾರ ಫ್ಲಡ್ ಡ್ಯಾಮೇಜ್‌ನಲ್ಲಿ ಅಪ್ರೂವಲ್ ಆಗಿರತಕ್ಕಂಥ ಕೆಲಸಗಳಿಗೆ ಬಾಕಿ ಇರತಕ್ಕಂಥ ಹಣ 13 ಕೋಟಿ ರೂಪಾಯಿ. ನೀವು ಗ್ರಾಮೀಣ ಅಭಿವೃದ್ಧಿ ಹೇಗೆ ಮಾಡುತ್ತೀರಿ? ಗ್ರಾಮೀಣ ಜನರಿಗೆ ಹೇಗೆ ಜೀವ ಕೊಡುತ್ತೀರಿ? ಸಿ.ಎಂ.ಜಿ.ವೈ. ರಸ್ತೆಗಳು, ಇವೊತ್ತು ನನಗೆ ಅರ್ಥವಾಗುತ್ತಿಲ್ಲ, ಯಾವ ಇಂಜಿನಿಯರ್ ಇವರಿಗೆ ಸಲಹೆ ಮಾಡಿದ್ದಾರೆ, ಯಾವ ಟೆಕ್ನೋಕ್ರಾಟ್ಸ್....... ಸಲಹೆ ಮಾಡಿದ್ದಾರೋ, ಗೊತ್ತಿಲ್ಲ.

ಶ್ರೀಮತಿ ನಾಗಮಣಿ ನಾಗೇಗೌಡ: ಸಾರ್ ಒಂದ್ನಿಮಿಷ. ರೇನ್ ಡ್ಯಾಮೇಜಸ್ ಬಗ್ಗೆ ತಾವು ಹೇಳಿದಿರಿ. ದಯವಿಟ್ಟು ಮಾನ್ಯ ಸಚಿವರು ಅದರ ಬಗ್ಗೆ ಗಮನ ಹರಿಸಬೇಕು. ಈಗಾಗಲೇ ಫಸ್ಟ್ ಸ್ಟೇಜ್‌ನಲ್ಲಿ ಆಗಿರುವಂಥ ಕೆಲಸಗಳಿಗೇ ಜಿಲ್ಲಾ ಆಡಳಿತ ಒಂದು ನಯಾಪೈಸೆಯ ಹಣವನ್ನೂ ಕೂಡ ವಿತರಣೆ ಮಾಡಿಲಲ್ಲ. ಸೆಕೆಂಡ್ ಸ್ಟೇಜ್‌ನಲ್ಲಿ ಈಗಾಗಲೇ ಶಾಸಕರಾದ ನಾವುಗಳು ಹೇಳಿ ಅಲ್ಲಿ ಇಲ್ಲಿ ಒಂದಿಷ್ಟು ಕೆಲಸಗಳಿಗೆ ಒತ್ತಡ ತಂದು ಮಾಡಿಸಿದೆವು. ಅದಕ್ಕೂ ಕೂಡ ಹಣವನ್ನು ಬಿಡುಗಡೆ ಮಾಡಲಿಲ್ಲ. ನಮ್ಮ ಜಿಲ್ಲಾ ಡಿ.ಸಿ. ಯವರು ಹೇಗಿದ್ದಾರೆಂದರೆ ಇದುವರೆಗೂ ಒಂದು ಬಾರಿ ಮೀಟಿಂಗ್ ತೆಗೆದುಕೊಳ್ಳುವಷ್ಟು ಬಿಡುವು ಅವರಿಗಿಲ್ಲವಾಗಿದೆ. ಶಾಸಕರಿಗೇ ಅವರು ಸಿಗುವುದಿಲ್ಲ. ನಾವು ಹೇಳದರೆ, ಮೀಟಿಂಗ್ ಕರೆಯುತ್ತೇವೆ ಎನ್ನುತ್ತಾರೆಯೇ ಹೊರತು ಮೀಟಿಂಗ್ ಕರೆಯುವುದಿಲ್ಲ. ನಾವು ಯಾವ ರೀತಿ ಅಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆ? ದಯವಿಟ್ಟು ಮಂತ್ರಿಗಳು ಇದರ ಬಗ್ಗೆ ಗಮನ ಹರಿಸಿ ಏನು ರೇನ್ ಡ್ಯಾಮೇಜಸ್ ಅಡಿಯಲ್ಲಿ ಇದುವರೆಗೂ ಕೆಲಸವನ್ನು ತೆಗೆದುಕೊಂಡಿದ್ದಾರೋ ಅದಕ್ಕೆ ಹಣ ಬಿಡುಗಡೆ ಮಾಡಬೇಕು. ಏನು ನೋಡಲ್ ಆಫೀಸರ್ಸ್ ವರ್ಕ್‌ಗಳನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದಾರೋ ಆ ಕೆಲಸವನ್ನು ಮಂಜೂರು ಮಾಡಸಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದಂಥ ಶ್ರೀರಾಮುರೆಡ್ಡಿಯುವರು ಒಂದು ಒಳ್ಳೆಯ ವಿಚಾರವನ್ನು ಹೇಳಿದರು. ಗ್ರಾಮೀಣ ರಸ್ತೆಗೆ ಮುಖ್ಯಮಂತ್ರಿಗಳ ರೋಜ್‌ಗಾರ್ ಯೋಜನೆಯಲ್ಲಿ 80 ಕೋಟಿ ರೂಪಾಯಿಗಳನ್ನು ಮಾತ್ರ ಈ ವರ್ಷದಲ್ಲಿ ನಿಗದಿ ಮಾಡಿದ್ದಾರೆ ಎನ್ನುವಂಥ ಮಾತನ್ನು ಹೇಳಿದರು. ಬಹುತೇಕ ಎಲ್ಲರಿಗೂ ಗೊತ್ತಿರಬಹುದು, ಈ ಸಾರಿ ಕೇಂದ್ರ ಸರ್ಕಾರ 12ನೆಯ ಫೈನಾನ್ಸ್ ಕಮಿಷನ್ ಮೂಲಕ 360 ಕೋಟಿ ರೂಪಾಯಿಗಳನ್ನು ಕರ್ನಾಟಕ ಸರ್ಕಾರಕ್ಕೆ ಕೊಟ್ಟಿದ್ದಾರೆ. ಕಳೆದ ವರ್ಷ ಒಂದು ರೂಪಾಯಿಯನ್ನೂ ಕೊಟ್ಟಿರಲಿಲ್ಲ. 11ನೇ ಫೈನಾನ್ಸ್ ಕಮಿಷನ್ ಎಂದರೆ 2000 ದಿಂದ 2005 ರವರೆಗೆ, 11ನೇಯ ಹಣಕಾಸಿನಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ಸರ್ಕಾರಕ್ಕೆ ರಸ್ತೆ ಅಭಿವೃದ್ಧಿಗಾಗಿ ಒಂದು ರೂಪಾಯಿಯೂ ಬರಲಿಲ್ಲ. ಈ ವರ್ಷ 360 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಬಜೆಟ್‌ನಲ್ಲಿಯೇ ಇದೆ. 360 ಕೋಟಿ ರೂಪಾಯಿಗಳಲ್ಲಿ 150 ಕೋಟಿ ರೂಪಾಯಿಗಳನ್ನು ಪಿಡಬ್ಲ್ಯೂಡಿಗೆ ಇಟ್ಟಿದ್ದಾರೆ ಮತ್ತು ಉಳಿದ ಹಣವನ್ನು ರೂರಲ್ ಡೆವಲಪ್‌ಮೆಂಟ್‌ಗಾಗಿ ಇಟ್ಟಿದ್ದಾರೆ. ಆ ಹಣ ಎಲ್ಲಿ ಹೋಯಿತು? ಅದನ್ನು ಯಾರಿಗೆ ಕೊಡುತ್ತಿದ್ದೀರಿ? ಯಾವ ವಿಲೇಜ್‌ಗಳಿಗೆ ಕೊಡುತ್ತಿದ್ದೀರಿ, ಯಾವ ವಿಧಾನದ ಮೇಲೆ ವಿಧಾನಸಭಾ ಕ್ಷೇತ್ರಕ್ಕೆ ಕೊಡುತ್ತಿದ್ದೀರಿ ಎಂಬುದು ಗೊತ್ತಾಗಬೇಕು. ಅದರ ಬಗ್ಗೆ ಮೆನ್‌ಶನ್ ಇಲ್ಲ. The Government of India has given Rs.360 crores under 12th Finance Commission. Where did that money go! ಅದರ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ನನಗೆ ಅರ್ಥವಾಗುತ್ತಿಲ್ಲ. ಯಾವ ಆಧಾರದ ಮೇಲೆ ಸಿ.ಎಂ.ಜಿ.ವೈ.ಎಸ್.ನಲ್ಲಿ ರಸ್ತೆಗಳಿಗೆ ಇವರು ಹಣ ಕೊಡುತ್ತಿದ್ದಾರೆ ಒಂದು ಕಿ.ಮೀ. ರಸ್ತೆ ಇವೊತ್ತೇನಾದರೂ ಪರ್‌ಫೆಕ್ಟಾಗಿ ಮಾಡಬೇಕೆಂದರೆ ಕನಿಷ್ಟ 12 ಲಕ್ಷ ರೂಪಾಯಿಗಳು ಬೇಕು. ಒಂದು ಕಿ.ಮೀ.ಗೆ ಮೆಟಲಿಂಗ್ ಮಾಡಿ, ಆಸ್ಫಾಲ್ಟ್ ಮಾಡಿ ಎಲ್ಲವನ್ನೂ ಮಾಡಬೇಕಾದರೆ 12 ಲಕ್ಷ ರೂಪಾಯಿ ಬೇಕು. ಇವರು ಕೊಟ್ಟಿರತಕ್ಕಂಥ ಹಣದಲ್ಲಿ ಎಷ್ಟು ಕಿ.ಮೀ.ಗಳ ರಸ್ತೆ ಆ ರೇಂಜ್‌ನಲ್ಲಿ ಮಾಡಬಹುದು ಎಂದು ಲೆಕ್ಕ ಹಾಕಿ. ಇಡೀ ಕರ್ನಾಟಕ ರಾಜ್ಯಕ್ಕೆ ಇವರು ಕೊಟ್ಟಿರತಕ್ಕಂಥ ಹಣದಲ್ಲಿ ಎಷ್ಟು ಕಿ.ಮೀ. ರಸ್ತೆ ಮಾಡಬಹುದು ಎಂಬುದನ್ನು ಹೇಳಿ. ಪಿಡಬ್ಲ್ಯೂಡಿ ರಸ್ತೆಗಳ ಬಗ್ಗೆ ನಾನು ಹೇಳುತ್ತಿಲ್ಲ, ಜಿಲ್ಲಾ ಪಂಚಾಯತ್ ರೋಡ್‌ಗಳ ಬಗ್ಗೆ ನಾನು ಹೇಳುತ್ತಿರುವುದು. ನೀವು ಏನು 200 ಕೋಟಿಯೋ, 250 ಕೊಡುತ್ತೀರೋ ಅಥವಾ 80 ಕೊಡುತ್ತೀರೋ ಅದರಲ್ಲಿ, ಎಷ್ಟು ಕಿ.ಮೀ. ರಸ್ತೆಗಳನ್ನು ನೀವು ಮಾಡುತ್ತೀರಿ? ಒಂದು ಕಿ.ಮೀ.ಗೆ 12 ಲಕ್ಷ ರೂಪಾಯಿಗಳ ಪ್ರಕಾರ ಎಷ್ಟು ಕಿ.ಮೀ. ರಸ್ತೆಗಳನ್ನು ಕರ್ನಾಟಕ ರಾಜ್ಯದಲ್ಲಿ ಮಾಡವುದಕ್ಕೆ ಆಗುತ್ತದೆ? ಈ ರೇಂಜ್‌ನಲ್ಲಿ ನೀವು ರೋಡ್‌ಗಳನ್ನು ಮಾಡುತ್ತಾ ಹೋದರೆ ಎಷ್ಟು ನೂರು ವರ್ಷಕ್ಕೆ ನೀವು ಕರ್ನಾಟಕ ರಾಜ್ಯದಲ್ಲಿ ರಸ್ತೆಗಳನ್ನು ಮಾಡಿಮುಗಿಸಬಹುದು? ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತೇವೆ ಎಂದು ನೀವು ಹೇಳುತ್ತೀರಲ್ಲಾ, ರಸ್ತೆಯೇ ಇಲ್ಲದೇ ಮೂಲಭೂತ ಸೌಕರ್ಯವನ್ನು ಹೇಗೆ ಒದಗಿಸುತ್ತೀರಿ? ಗ್ರಾಮೀಣ ಪ್ರದೇಶಗಳಿಗೆ ರಸ್ತೆ ಮತ್ತು ಕುಡಿಯುವ ನೀರು ಮೂಲಭೂತ ಅವಶ್ಯಕತೆಗಳು. ರಸ್ತೆಗಳಿಗೆ, ಕುಡಿಯುವ ನೀರಿಗೆ ಹಣ ಕೂಡದೇ ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದೀರಲ್ಲಾ, ಯಾವ ರೀತಿ ಮಾಡುತ್ತೀರಿ? ಇನ್ನು ಕಾರ್ಮಿಕ ಇಲಾಖೆ ಬಗ್ಗೆ ಈಗ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಐ.ಟಿ.ಐ.ಗಳಿಗೆ ಇವೊತ್ತಿಗೂ ಕೂಡ ಸ್ವಂತ ಕಟ್ಟಡವಿಲ್ಲ. ಇವೊತ್ತು ಕರ್ನಾಟಕ ರಾಜ್ಯದಲ್ಲಂತೂ ಕಾರ್ಮಿಕರಿಗೆ ರಕ್ಷಣೆಯೇ ಇಲ್ಲ. ಮಾಲೀಕರಿಗೆ ಬಿಟ್ಟರೆ ಕಾರ್ಮಿಕರಿಗೆ ರಕ್ಷಣೆ ಕೊಡತಕ್ಕಂಥ ಕಾರ್ಯಕ್ರಮ ಈ ಸರ್ಕಾರದ ಮುಂದೆ ಇಲ್ಲ. ಐ.ಟಿ.ಐ.ಗೆ ಬಿಲ್ಡಿಂಗ್‌ಗಳು ಇಲ್ಲ. ಯಾವ ರೀತಿಯಲ್ಲಿ ನೀವು ಇದನ್ನು ಮಾಡುತ್ತೀರಿ? ಲೋಕೋಪಯೋಗಿ ಇಲಾಖೆಯಲ್ಲಿ 2005–06ರಲ್ಲಿ ರಸ್ತೆ ವಲಯಕ್ಕೆ 1440 ಕೋಟಿ ಕೊಟ್ಟಿದ್ದೀರಿ. 2006–07ಕ್ಕೆ 2382 ಕೋಟಿ ರೂ. ನಿಮ್ಮ ಇನ್‌ಫ್ಲೇಷನ್ ರೇಟ್, ಇವೊತ್ತು ಕಾಸ್ಟ್ ಆಫ್ ಪ್ರೊಡಕ್ಷನ್, ಟಾರು, ಮೆಟ್ಲಿಂಗ್ ಇವೆಲ್ಲಾ ಲೆಕ್ಕ ಹಾಕಿದರೆ 1440 ಕೋಟಿ ರೂ.ಯನ್ನು 2005–06ರಲ್ಲಿ ಕೊಟ್ಟಿದ್ದೀರಿ, ಈಗ 2382 ಕೋಟಿ ರೂ. ಕೊಡುತ್ತಿದ್ದೀರಿ. ನಿಮ್ಮ ಇನ್‌ಫ್ಲೇಷನ್ ರೇಟ್ ಮತ್ತು ಕಾಸ್ಟ್ ಆಫ್ ಮೆಟೀರಿಯಲ್ ಇನ್‌ಕ್ರೀಸ್ ಆಗಿರತಕ್ಕಂಥದ್ದನ್ನು ಎರಡನ್ನೂ ಸೇರಿಸಿದರೆ ಎಷ್ಟು ಪರ್ಸೆಂಟ್ ಜಾಸ್ತಿ ಆದ ಹಾಗ ಆಗುತ್ತದೆ? ಎಷ್ಟು ಪರ್ಸೆಂಟ್ ಜಾಸ್ತಿ ನೀವು ಕೊಟ್ಟಿದ್ದೀರಿ? ಕಳೆದ ವರ್ಷ ಮಾಡಿರತಕ್ಕಂಥ ಕೆಲಸಗಳಿಗೆ ಬಿಲ್‌ಗಳು ಇನ್ನೂ ಬಾಕಿ ಎಷ್ಟಿವೆ? ಅದಕ್ಕೆ ಹಣ ಎಲ್ಲಿಂದ ತಂದುಕೊಡುತ್ತೀರಿ? ಬಾಕಿ ಹಣ ಹೋದರೆ, ಹೊಸ ರಸ್ತೆಗಳಿಗೆ ಎಷ್ಟು ಹಣ ಉಳಿಯುತ್ತದೆ? ನನಗೆ ಗೊತ್ತಿರತಕ್ಕಂಥ ಮಾಹಿತಿ ಪ್ರಕಾರ 900 ಕೋಟಿ ರೂಪಾಯಿಗಳ ಬಿಲ್‌ಗಳು ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇದೆ. ಈಗೇನು ನೀವು 2382 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ ಅದರಲ್ಲಿ 900 ಕೋಟಿ ರೂಪಾಯಿಗಳು ಬಾಕಿಗೆ ಹೋದರೆ ಇನ್ನು ಎಷ್ಟು ಉಳಿಯುತ್ತದೆ, ಇದರಲ್ಲಿ ನೀವು ಎಷ್ಟು ಕಿ.ಮೀ. ರಸ್ತೆಯನ್ನು ಮಾಡುತ್ತೀರಿ? ಇದರಲ್ಲಿ ನಬಾರ್ಡ್ ಅಮೌಂಟ್ ಇದೆ, ನಬಾರ್ಡ್ ಬ್ಯಾಂಕ್ ಸಾಲ

ಇದೆ. ಕರ್ನಾಟಕ ರಾಜ್ಯದ ಹಣ ಎಷ್ಟು? ಇವತ್ತು ನಬಾರ್ಡ್‌ನಿಂದ ಹಣ ಕೊಡಲಿಲ್ಲವೆಂದರೆ ಲೋಕೋಪಯೋಗಿ ಇಲಾಖೆಯವರು ಬಾಗಿಲು ಮುಚ್ಚಿಕೊಂಡು ಹೋಗಬೇಕಷ್ಟೇ. ಪಿಡಬ್ಲ್ಯೂಡಿ ಉಳಿಯುವುದೇ ಇಲ್ಲ. ವರ್ಲ್ಡ್ ಬ್ಯಾಂಕ್ ಸಾಲ ಕೊಡಬೇಕೋ ಅಥವಾ ನಬಾರ್ಡ್ ಸಾಲ ಕೊಡಬೇಕೋ? ನಬಾರ್ಡ್ ಮತ್ತು ವರ್ಲ್ಡ್ ಬ್ಯಾಂಕ್ ಇಲ್ಲ ಎಂದರೆ ಪಿಡಬ್ಲ್ಯೂಡಿಯನ್ನು ಕ್ಲೋಸ್ ಮಾಡಬಾಕಾಗುತ್ತದೆ. ಬೇರೆ ಏನೂ ದಾರಿಯೇ ಇಲ್ಲ. ಅದಕ್ಕಾಗಿ ನಾವು ನಮ್ಮ ರಾಜ್ಯದಿಂದ ಸ್ವಂತ ಹಣವನ್ನು ಪಿಡಬ್ಲ್ಯೂಡಿಗೆ ಎಷ್ಟು ಕೊಡುತ್ತಿದ್ದೇವೆ? ಈಗ ಇಟ್ಟಿರುವ 2382 ಕೋಟಿ ರೂಪಾಯಿಗಳಲ್ಲಿ ನಬಾರ್ಡ್ ಭಾಗ ಎಷ್ಟು? ವರ್ಲ್ಡ್ ಬ್ಯಾಂಕ್ ಸಾಲ ಎಷ್ಟು? ಲೆಕ್ಕ ಹೇಳಿ. ಹಾಗಾದರೆ ನಿಮ್ಮ ದುಡ್ಡು ಎಷ್ಟು? ನಾನು ರಸ್ತೆ ನಿರ್ಮಾಣದ ಬಗ್ಗೆ ಪ್ರತಿ ಕ್ಷೇತ್ರಕ್ಕೆ 50 ಲಕ್ಷ ರೂ. ಯಂತೆ ಕೊಟ್ಟರೆ 5 ಕಿಲೋಮೀಟರ್ ರಸ್ತೆ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಬೆಳಿಗ್ಗೆ ಹೇಳಿದ್ದೇನೆ. ಅದರಲ್ಲಿ ಪಿಡಬ್ಲ್ಯೂಡಿ ರಸ್ತೆ ಎಂದು ಹೇಳಿದಿರಿ, ಜೆಡ್‌ಪಿ ರಸ್ತೆ ಗತಿಯೇನು? ಅದಕ್ಕೆ ಯಾರು ಹಣ ಕೊಡುತ್ತಾರೆ? ಈ ಬಗ್ಗೆ ಏನೂ ಮಾಹಿತಿ ಇಲ್ಲ. ಇನ್ನು ಇದೊಂದು ಜಪ ಈ ದೇಶದಲ್ಲಿ ಸಾಮಾಜಿಕ ನ್ಯಾಯ ಕೊಡಬೇಕು ಅಂತ ಎಂದು ಯಾವ ರಾಜಕೀಯ ಪಕ್ಷದ ಬಾಯಲ್ಲಿ ಕೂಡ ಸಾಮಾಜಿಕ ನ್ಯಾಯ, ಸಾಮಾಜಿಕ ನ್ಯಾಯ. ಆ ಪದ ಉಪಯೋಗಿಸದೆ ಯಾವ ರಾಜಕಾರಣಿನೂ ಭಾಷಣ ಮಾಡುವುದಿಲ್ಲ. ಯಾವ ರಾಜಕೀಯ ಪಕ್ಷ ಕೂಡ ಮಾತನಾಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಬಂದಿರತಕ್ಕಂಥ ಹಣದಲ್ಲಿ ಬಳಕೆ ಆಗದೇ ಇರುವಂತಹ ಹಣ 101 ಕೋಟಿ ರೂಪಾಯಿ ಇದೆ. ಇದು ಹೋದ ವರ್ಷದ್ದು. ನಾನ್ ಯುಟಿಲೈಜ್ 101 ಕೋಟಿ ರೂಪಾಯಿ. ಇದು ಯುಟಿಲೈಜ್ ಆಗಿಲ್ಲ. ಸಮಾಜ ಕಲ್ಯಾಣ ಇಲಾಖೆಗೆ ಬಂದಂಥಾದ್ದು. ಆದರೆ ಇವರ ಸೋಷಿಯಲ್ ಜಸ್ಟೀಸ್ ಬಗ್ಗೆ ಮಾತನಾಡುತ್ತಾರೆ. ಇದು ಬೊಂಬಾಟ್ ಬಜೆಟ್!

ಶ್ರೀ ಹೆಚ್.ಡಿ. ಬಸವರಾಜ್: ಹಣ ಬಳಕೆಯಾಗಲಿಲ್ಲವೆಂದರೆ ಅವರಿಗೆ ಟೀಕೆ ಮಾಡಬೇಕು. ಬೋಬಾಟ್ ಬಜೆಟ್ ಬಗ್ಗೆ ಏಕೆ ಟೀಕೆ ಮಾಡುತ್ತೀರಾ? ಹಣ ಖರ್ಚು ಮಾಡದೆ ಇರುವುದು ನೀವು. ಅದನ್ನು 'ಅವರು' ಟೀಕೆ ಮಾಡುತ್ತಿದ್ದಾರೆ, ಒಪ್ಪಿಕೊಳ್ಳಿ. ಇಲ್ಲಲ್ಲ ಹೇಳುವುದು, ಆದರೆ ಆ ಬೊಂಬಾಟ್ ಬಜೆಟ್‌ನಲ್ಲಿ ಅದನ್ನು ನಾವು ಟೀಕೆ ಮಾಡಲಿಲ್ಲ. ಆದರೆ ಸರಿಪಡಿಸಿ, ಅದಕ್ಕೆ ಹೆಚ್ಚು ಹಣವನ್ನು ಕೊಡುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅದನ್ನು ಖರ್ಚು ಮಾಡೇ ಮಾಡುತ್ತೇವೆ. ಕಾದು ನೋಡಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಇಲ್ಲಿ ಹೇಳಿದ್ದೀರಿ. ಲೆಕ್ಕ, ನೀವು ಎಷ್ಟು ಜಾಸ್ತಿ ಕೊಟ್ಟಿದ್ದೀರಿ ಎಂದು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಇಷ್ಟೇ ಉತ್ಸಾಹ ಆ ಕಡೆ ಇರುವಂತಹ ಮಂತ್ರಿಗಳು ತೋರಿಸಿದ್ದರೆ ನಮಗೆ ಖುಷಿಯಾಗುತ್ತಿತ್ತು. ಇದನ್ನು ಮಂತ್ರಿಗಳು ತೋರಿಸಬೇಕಾಗಿತ್ತು, ಆದರೆ ಶಾಸಕರು ತೋರಿಸುತ್ತಿದ್ದಾರೆ. ಮಾನ್ಯ ಬಸವರಾಜ್ ಅವರು ಮಂತ್ರಿಯಾದಾಗ ನಾವು ಖುಷಿ ಪಡುತ್ತೇವೆ. ನೀವು ಶಾಸಕರೆಲ್ಲಾ ಹಾರಾಡಿ. ಬೀಳುತ್ತಿದ್ದೀರಿ, ಆದರೆ ಮಂತ್ರಿಗಳೆಲ್ಲಾ ಮಲಗಿಕೊಂಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್: ನಮ್ಮ ಮಂತ್ರಿಗಳು ಏನು ಬಜೆಟ್‌ನಲ್ಲಿ ಕೊಟ್ಟಿದ್ದಾರೆ ಅದನ್ನು ಕಾರ್ಯಗತ ಮಾಡೇ ಮಾಡುತ್ತೇವೆ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು: ಬಸವರಾಜ್ ರವರೇ ನೀವು ಮಂತ್ರಿ ಆದಮೇಲೆ . . .

ಉಪಾಧ್ಯಕ್ಷರು: ಇದು ಚೆನ್ನಾಗಿ ಇದೆ, ಅವರ ಮಾತುಗಳಿಗಿಂತ ಇದು ಬಹಳ ಲಕ್ಷಣವಾಗಿದೆ. ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ್: ಇನ್ನೂ ಸರ್ಕಾರಕ್ಕೆ 60 ದಿವಸವಾಗಿಲ್ಲ. ಆಗಲೇ ಇಷ್ಟೊಂದು ಹಿಂಸೆ ಕೊಡುತ್ತಿದ್ದೀರಲ್ಲಾ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್: ಒಂದು ದಿವಸ ನಾವು ಈ ಒಂದು ಸಭೆಯಲ್ಲಿ ಈ ತರಹ ಕೇಳಿದ್ದು ನೋಡಿದ್ದೀರಾ? ಇದಕ್ಕೆ ಮಾನದಂಡ ಏನು? ಯಾವ ಉದ್ದೇಶಕ್ಕೋಸ್ಕರ ಈ ತರಹ Break-up details ಕೇಳುತ್ತಿದ್ದೀರಿ?

ಶ್ರೀ ಮಹದೇವ್: ಮಾನ್ಯ ಉಪಾಧ್ಯಕ್ಷರೆ, ಪ್ರತಿಸಲ ಬಜೆಟ್‌ನಲ್ಲಿ ಎಲ್ಲರೂ ಆಡಳಿತ ಪಕ್ಷದವರು ಆ ದಿಕ್ಕಿನಲ್ಲಿ ಮಾತನಾಡಿರುತ್ತಾರೆ, ವಿರೋಧ ಪಕ್ಷದವರು ಈ ದಿಕ್ಕಿನಲ್ಲಿ ಮಾತನಾಡಿರುತ್ತಾರೆ. Don't take it too literal.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಿದ್ದು ನಾನ್ ಯುಟಿಲೈಸ್ಡ್ 101 ಕೋಟಿ ರೂಪಾಯಿ ಎಂದು. ಮಿಸ್ ಯೂಟಿಲೈಸ್ಡ್ ಎಂದು ಹೇಳಲಿಲ್ಲ. ನೀವು ಮಿಸ್ ಯೂಟಿಲೈಸ್ ಮಾಡಿದಿರಿ ಎಂದು ಹೇಳಲಿಲ್ಲ ಸ್ವಾಮಿ. ಹೋದ ವರ್ಷದ ಬಜೆಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಬಂದಂತಹ ಹಣದಲ್ಲಿ ಖರ್ಚಾಗದೆ ಇರುವಂತಹ ಹಣ 101 ಕೋಟಿ ರೂಪಾಯಿ. ಇದು ನಾನ್ ಯುಟಿಲೈಸ್ಡ್ ಫಂಡ್. ಮಿಸ್ ಯುಟಿಲೈಸ್ಡ್ ಎಂದು ನಾನು ಹೇಳಲಿಲ್ಲ. ನಾನ್ ಯುಟಿಲೈಸ್ಡ್ 101 ಕೋಟಿ ರೂಪಾಯಿಯಾದರೆ ಮಿಸ್ ಯುಟಿಲೈಸ್ಡ್ 4 ಕೋಟಿ 60 ಲಕ್ಷ ರೂಪಾಯಿಗಳು. ನಾನ್ ಯುಟಿಲೈಸ್ಡ್ ಒಂದು ಕಡೆ, ಮಿಸ್ ಯುಟಿಲೈಸ್ಡ್ ಇನ್ನೊಂದು ಕಡೆ ಆದರೆ ಸೋಷಿಯಲ್ ಜಸ್ಟೀಸ್ ಬಗ್ಗೆ ಭಾಷಣ ಮಾಡುವುದು.

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಉಪಾಧ್ಯಕ್ಷರೆ, ಆರು ಗಂಟೆಗೆ ನಮ್ಮ ಪಕ್ಷದ ಶಾಸಕರ ಸಭೆ ಇದೆ, 6.30 ಕ್ಕೆ ರವಿಶಂಕರ್ ಗುರೂಜಿಯವರ ಭಾಷಣ ಇದೆ.

ಉಪಾಧ್ಯಕ್ಷರು: ರೆಡ್ಡಿಯವರೆ, ನಿಮಗೆ ಎಷ್ಟೊತ್ತು ಬೇಕಾಗುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇನ್ನೊಂದು 20 ನಿಮಿಷ ಬೇಕು.

ಉಪಾಧ್ಯಕ್ಷರು: ಒಂದು ಗಂಟೆಯಾಯಿತು ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ. 5 ಗಂಟೆಗೆ ಪ್ರಾರಂಭ ಮಾಡಿದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಮಾತನಾಡಿದ್ದು ಒಂದು ಗಂಟೆ ಅಲ್ಲ ಬೇರೆಯವರೂ ಮಾತನಾಡಿದರು.

ಉಪಾಧ್ಯಕ್ಷರು: ಬೇರೆಯವರಿಗೆ ನೀವು ಅವಕಾಶ ಮಾಡಿಕೊಟ್ಟಿರಿ; ಆದ್ದರಿಂದ ಬೇರೆಯವರೆಲ್ಲಾ ಮಾತನಾಡಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನೇನು ಅವರನ್ನು ಮಾತನಾಡಿ ಎಂದು ಹೇಳಿದೆನೆ? ನಾನೇನಾದರೂ ಒಂದು ಅಕ್ಷರ ಅನಾವಶ್ಯವಾಗಿ ಮಾತನಾಡಿದ್ದರೆ ಹೇಳಿ.

ಉಪಾಧ್ಯಕ್ಷರು: ತಾವು 20 ನಿಮಿಷ ತೆಗೆದುಕೊಳ್ಳುವುದು ಬೇಡ. ಇನ್ನೊಂದು ಐದು ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಹೆಚ್.ಡಿ. ಬಸವರಾಜ್: ಅವರು ಮಾತನಾಡುವಾಗ ಅದಕ್ಕೆ ನಾವು ಉತ್ತರ ಕೊಡುವುದು ಬೇಡವೆ? ಬೊಂಬಾಟ್ ಬಜೆಟ್ ಎಂದಾಗ ನಾವು ಅದನ್ನು ಏನು ಎಂದು ಹೇಳಬೇಕಲ್ಲವೆ? ಆ ಬೊಂಬಾಟ್‌ಗೆ ನಾವು ಅರ್ಥ ಹೇಳಬೇಕಲ್ಲಾ.

(ಗೊಂದಲ)

ಉಪಾಧ್ಯಕ್ಷರು: ರೆಡ್ಡಿಯವರೆ, ಇನ್ನೊಂದ್ಯೆದು ನಿಮಿಷದಲ್ಲಿ ಮುಗಿಸಿಬಿಡಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್: ಸಮಾಜ ಕಲ್ಯಾಣ ಇಲಾಖೆಯಲ್ಲಿ 101 ಕೋಟಿ ರೂಪಾಯಿ ನೀವು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ ಇದಕ್ಕಿಂತ ನಿದರ್ಶನ ಬೇಕಾ?

ಒಬ್ಬರು ಮಾನ್ಯ ಸದಸ್ಯರು: 40 ದಿವಸ ಆಯಿತು ಏನು ಮಾಡಿದಿರಿ?

ಶ್ರೀ ಹೆಚ್.ಡಿ. ಬಸವರಾಜ್: ಯಾವ ರೀತಿ ಮಾಡುತ್ತಾರೆಂದು ಕಾದು ನೋಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೋಡಿ ನಿಮ್ಮ ಕೈಯಲ್ಲಿ ಏನೂ ಆಗುವುದಿಲ್ಲ. ಅಲ್ಲಿ ಸಚಿವರೆಲ್ಲಾ ಮಲಗಿದ್ದಾರೆ, ನೀವು ಶಾಸಕರು . . .

ಶ್ರೀ ಹೆಚ್.ಡಿ. ಬಸವರಾಜ್: ಅದಕ್ಕೇ ಆ ಕಡೆಯಿಂದ ಈ ಕಡೆ ಬಂದಿರುವುದು. ಏನೂ ಆಗದೆ ಇರುವಂತಹವರು ನೀವು ಆ ಕಡೆ ಹೋಗಿರುವುದು.

ಶ್ರೀ ಎಂ.ಪಿ. ರೇಣುಕಾಚಾರ್ಯ: 1947 ರಿಂದ ಈ ದೇಶ ಆಳಿದ್ದೀರಿ. 40 ದಿವಸಕ್ಕೇ ಟೀಕೆ ಮಾಡುತ್ತೀರಲ್ಲಾ. 1947 ರಿಂದ ಏನು ಮಾಡಿದ್ದೀರಿ?

ಉಪಾಧ್ಯಕ್ಷರು: ರೆಡ್ಡಿಯವರೆ, ನೀವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ತರಹ ಗಲಾಟೆಯಾದರೆ ನಾನು ಹೇಗೆ ಮಾತನಾಡುವುದು? ಈ ಲೆಕ್ಕ ಹೇಳುತ್ತಿರುವುದು ನಾನಲ್ಲ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಕೊಟ್ಟಿರತಕ್ಕಂಥ ಈ ವರ್ಷದ ವರದಿಯಲ್ಲಿ ಅದು ಇರುವುದು. ನಾನ್ ಯುಟಿಲೈಸ್ಡ್ ಅಂಡ್ ಮಿಸ್ ಯುಟಿಲೈಸ್ಡ್. ನಾನು ಈಗ ಇವರು ಮಿಸ್ ಯುಟಿಲೈಸ್ಡ್ ಮಾಡಲಿಲ್ಲವಾ, ಅವರು ಯುಟಿಲೈಸ್ ಮಾಡಲಿಲ್ಲವಾ ಎಂದು ಹೇಳುತ್ತಿಲ್ಲ. ಸರ್ಕಾರ ಎಂದು ನಾನು ಹೇಳುತ್ತಿದ್ದೇನೆ. ಅದು ಯಾರಿಗೆ ಸಂಬಂಧಪಡುತ್ತದೆ ಅವರಿಗೆ ಅನ್ವಯ ಆಗುತ್ತದೆ. ಇನ್ನು ಯಾವ್ಯಾವುದರಲ್ಲಿ ಎಷ್ಟು ಯುಟಿಲೈಸ್ ಆಗಿಲ್ಲವೆನ್ನುವುದು ಇದೆ. ಆದರೆ ಅದಕ್ಕೆ ಟೈಂ ಇಲ್ಲ, ನಾನು ಅದನ್ನು ಹೇಳುವುದಿಲ್ಲ. ಒಟ್ಟು 101 ಕೋಟಿ ರೂಪಾಯಿ ಯುಟಿಲೈಸ್ ಆಗಿಲ್ಲ. 4 ಕೋಟಿ 60 ಲಕ್ಷ ರೂ. ಮಿಸ್‌ಯುಟಿಲೈಸ್ ಆಗಿದೆ. ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು ಎನ್ನುವಂತಹ ವಿಚಾರವನ್ನು ನಿಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನೊಂದು ನಾನು ಪ್ರಾರಂಭದಲ್ಲಿ ಹೇಳಿದೆ ಬಿಜೆಪಿಯ ಕಾರ್ಯಕ್ರಮದ ಅನುಗುಣವಾಗಿ ಈ ಬಜೆಟ್ ಅನ್ನು ಮಂಡಿಸಿದ್ದಾರೆಂದು ಹೇಳಿದೆ. ಅದಕ್ಕೆ ನಾನು ಆಧಾರವಾಗಿ ಲೆಕ್ಕ ಕೊಡುತ್ತೇನೆ. ಆರಾಧನಾ ಕಾರ್ಯಕ್ರಮ 11 ಕೋಟಿ 20 ಲಕ್ಷ ರೂಪಾಯಿ, ತಿರುಪತಿಯಲ್ಲಿ ವಸತಿ ಗೃಹ 5 ಕೋಟಿ ರೂಪಾಯಿ, ಐತಿಹಾಸಿಕ ದೇವಾಲಯಗಳ ಪುನರುತ್ಥಾನಕ್ಕೆ 5 ಕೋಟಿ ರೂಪಾಯಿ, ಕೂಡಲ ಸಂಗಮ 20 ಕೋಟಿ ರೂಪಾಯಿ, ಕಾಗಿನೆಲೆಗೆ 3 ಕೋಟಿ ರೂಪಾಯಿ, ಮಾನಸ ಸರೋವರ ಪ್ರವಾಸಕ್ಕೆ 25 ಸಾವಿರ, ಇವೆಲ್ಲಾ ಈ ಸಾಲಿನ ಆಯವ್ಯಯದ ಪುಸ್ತಕದಲ್ಲಿ ಪ್ರಸ್ತಾಪ ಇದೆ. ಆದರೆ

ಇದಕ್ಕೆಲ್ಲಾ ಸೇರಿದರೆ ಎಷ್ಟು ಕೋಟಿ ರೂಪಾಯಿ ಆಗುತ್ತದೆ? ಅದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ, ಇವರು ಪಶುಸಂಗೋಪನೆಗೆ 2.70 ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಾನು contrasting ಎವಿಡೆನ್ಸ್ ನಿಮಗೆ ಕೇಳುತ್ತಿರುವುದು. ಅದಕ್ಕೆ ನಾನು ಹೇಳುತ್ತೇನೆ, ಇವತ್ತು ಈ ಬಜೆಟ್‌ನ ಪರಿಸ್ಥಿತಿ ಹೇಗಿದೆ ಎಂದರೆ, ಇದೊಂದು ರೀತಿಯಲ್ಲಿ ನಾವು ಧಾರ್ಮಿಕ ಮೂಲಭೂತವಾದ ಮೋಹಕ್ಕೆ ಸಿಲುಕುತ್ತಿದ್ದೇವೆ. ಆದುದರಿಂದ ಕುವೆಂಪು ಅವರು ಒಂದು ಕಡೆ ಹೇಳುತ್ತಿದ್ದಾರೆ.

'ಸಿಲುಕದಿರಿ ಮತವೆಂಬ ಮೋಹದ ಜ್ಞಾನಕ್ಕೆ
ಮತಿಯಿಂದ ದುಡಿಯಿರಿ ಲೋಕ ಹಿತಕ್ಕೆ
ಈ ಮತದ, ಆ ಮತದ, ಹಳೇ ಮತದ
ಸಹವಾಸ ಸಾಕಿನ್ನು, ಇನ್ನು ಸೇರಿರೈ
ಮನುಜ ಮತಕ್ಕೆ, ಓ, ಬನ್ನಿ ಸಹೋದರರೆ
ವಿಶ್ವ ಪಥಕ್ಕೆ '

ಇದನ್ನು ನಾವು ಒಂದು ಕಡೆ ಜಪ ಮಾಡುತ್ತೇವೆ. ಕುವೆಂಪು ಅವರನ್ನು ಪೂಜೆ ಮಾಡುತ್ತೇವೆ. ನೂರು ವರ್ಷವಾಯಿತು ಎಂದು ಹಬ್ಬ ಮಾಡುತ್ತೇವೆ. ಆದರೆ ಅವರು ಹೇಳಿದ್ದನ್ನು ಮಾತ್ರ ಆಚರಣೆ ಮಾಡುವುದಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಆಚರಣೆ ಮಾಡತಕ್ಕಂಥ ಸ್ಥಿತಿಗೆ ನಾವು ಇವತ್ತು ನಾವು ಬಂದಿದ್ದೇವೆ. ಆದುದರಿಂದ ಇವತ್ತಿನ ಈ ಬಜೆಟ್‌ನಲ್ಲಿ ಯಾವುದಾದರೂ ಸಕರಾತ್ಮಾಕವಾದಂತಹ ಅಂಶ ಎಂದರೆ ಆರ್ಥಿಕ ಬೆಳವಣಿಗೆಗೆ, ಕರ್ನಾಟಕ ರಾಜ್ಯದ ಆರ್ಥಿಕ ಬೆಳವಣಿಗೆಗೆ ಬೇಕಾಗಿರತಕ್ಕಂಥ ಸಕರಾತ್ಮಕವಾಗಿರತಕ್ಕಂಥ ಒಂದೇ ಒಂದು ಅಂಶ ಈ ಬಜೆಟ್‌ನಲ್ಲಿ ಒಳಗೊಂಡಿಲ್ಲ. ಆರ್ಥಿಕ ಬೆಳವಣಿಗೆ ಎಂದರೆ ಏನು ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಆರ್ಥಿಕ ಬೆಳವಣಿಗೆ ಎಂದರೆ ಈ ಯೋಜನೆಗೆ ಇಷ್ಟು ಹಣ ಕೊಟ್ಟೆ, ಆ ಯೋಜನೆಗೆ ಇಷ್ಟು ಹಣ ಕೊಟ್ಟೆ, ಆ ಕಾರ್ಯಕ್ರಮಕ್ಕೆ ಇಷ್ಟು ಹಣ ಕೊಟ್ಟೆ, ಎಂದರೆ ಅದು ಆರ್ಥಿಕ ಬೆಳವಣಿಗೆ ಯೋಜನೆ ಅಲ್ಲ. ಇಡೀ ನಮ್ಮ ಕರ್ನಾಟಕ ರಾಜ್ಯದ ಉತ್ಪಾದನೆ ಹೆಚ್ಚು ಮಾಡಬೇಕು. ಕೈಗಾರಿಕಾ ರಂಗದಲ್ಲಿ ಉತ್ಪಾದನೆ ಹೆಚ್ಚು ಮಾಡಬೇಕು. ಕೃಷಿ ರಂಗದಲ್ಲಿ ಉತ್ಪಾದನೆ ಹೆಚ್ಚು ಮಾಡಬೇಕು. ಉತ್ಪಾದನೆ ಹೆಚ್ಚು ಮಾಡಿ ನಮ್ಮ ಜನರ ಜೀವನವಶ್ಯಕತೆಗೆ ಅನುಗುಣವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಹಾಕಿ ಅದರ ಮುಖಾಂತರ ಅದನ್ನು ಜಾರಿ ಮಾಡಬೇಕಾಗುತ್ತದೆ. ಆದರೆ ಇವತ್ತು ದುರಾದೃಷ್ಟವಷಾತ್ ಈ ಬಜೆಟ್‌ನಲ್ಲಿ ನಿರುದ್ಯೋಗ ಸಮಸ್ಯೆಗೆ ಯಾವುದೇ ಕಾರ್ಯಕ್ರಮ ಇಲ್ಲ. ಬಡತನ ನಿರ್ಮೂಲನೆಗೆ ಕಾರ್ಯಕ್ರಮ ಇಲ್ಲ. ಶಿಕ್ಷಣಕ್ಕೆ ಒಂದು ಪರ್ಸೆಂಟ್ ಕಡಿಮೆ ಮಾಡಿದಿರಿ. ಪ್ರೈಮರಿ ಎಜ್ಯುಕೇಷನ್‌ಗೆ ಒಂದು ಪರ್ಸೆಂಟ್ ಕಡಿಮೆ ಮಾಡಿದ್ದೀರಿ. ಎಲ್ಲಾ ರಾಜ್ಯಗಳಲ್ಲಿ ಶಿಕ್ಷಣಕ್ಕೆ ಹೆಚ್ಚು ಮಾಡುತ್ತಿದ್ದರೆ, ಇಲ್ಲಿ ಕಡಿಮೆ ಮಾಡಿದ್ದೀರಿ. ಹಾಗಾದರೆ ಯಾವ ರೀತಿ ಅಭಿವೃದ್ಧಿ ಮಾಡುತ್ತೀರಿ? ಅಭಿವೃದ್ಧಿಯಲ್ಲಿ ಎರಡು ವಿಧ. ಒಂದು ಪ್ರಾಕೃತಿಕ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಿ ರಾಜ್ಯದ ಆರ್ಥಿಕ ಸ್ಥಿತಿಯನ್ನು ಹೆಚ್ಚು ಮಾಡುವಂಥದ್ದು; ಇನ್ನೊಂದು ಕಡೆ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಮಾಡುವಂತಾದ್ದು. ಪ್ರಾಕೃತಿಕ ಸಂಪತ್ತನ್ನು ಅಭಿವೃದ್ಧಿ ಮಾಡಿ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಹಾಗೂ ಆರ್ಥಿಕ ಉತ್ಪಾದನೆಯನ್ನು ಹೆಚ್ಚಿಸಬೇಕು. ಇನ್ನೊಂದು ಕಡೆ ಭೌತಿಕ ಸಂಪನ್ಮೂಲವನ್ನು ಹಾಗೂ ಮಾನವ ಸಂಪನ್ಮೂಲವನ್ನು ಹೆಚ್ಚು ಮಾಡಬೇಕು. ಇವತ್ತಿಗೂ

ಕೂಡ ಇಡೀ ಜಗತ್ತಿನಲ್ಲಿ ಅಥವಾ ಕನಿಷ್ಠ ಏಷಿಯಾದಲ್ಲಿ ಅತ್ಯುನ್ನತವಾದಂತಹ ಮಾನವ ಸಂಪನ್ಮೂಲ ಇರುವುದು ಕರ್ನಾಟಕ ರಾಜ್ಯದಲ್ಲಿ. ಅದಕ್ಕೆ ನಾವು ಹೆಮ್ಮೆ ಪಡಬೇಕು. ಆದರೆ ಬರೀ ಹೆಮ್ಮೆ ಪಟ್ಟುಕೊಂಡರೆ ಪ್ರಯೋಜನ ಇಲ್ಲ. ಅದರಿಂದ ನಮ್ಮ ರಾಜ್ಯಕ್ಕೆ ಹೆಚ್ಚು ಉಪಯೋಗ ಆಗುವಂತಹ ರೀತಿಯಲ್ಲಿ ಆಗಬೇಕು.

ನೀವು ಒಂದು ಕಡೆ ನಮ್ಮಲ್ಲಿ ಐ.ಟಿ, ಬಿಟಿ, ಹೆಚ್ಚಾಗಿದೆಯೆಂದು ಹೇಳುತ್ತೀರಿ. ತಾವು ಇವತ್ತು ಒಂದು ವಿಚಾರವನ್ನು ತಿಳಿದುಕೊಳ್ಳಿ. ಕರ್ನಾಟಕ ರಾಜ್ಯದಲ್ಲಿ ನಿಮ್ಮ ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ 12 ಲಕ್ಷ ಜನ ಐಟಿ ಇಂಜಿನಿಯರ್ಸ್ ಅನ್ ಎಂಪ್ಲಾಯ್ಡ್ ಇದ್ದಾರೆ. ಆ ಮಾನವ ಸಂಪನ್ಮೂಲವನ್ನು, ಭೌತಿಕ ಶಕ್ತಿ ಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಮಗೆ ಶಕ್ತಿ ಇಲ್ಲದೇ, ಇವರು ಅಮೇರಿಕಾ, ಜರ್ಮನ್, ಇಂಗ್ಲೆಂಡ್‌ಗೆ ಹೋಗುತ್ತಿದ್ದಾರೆ. ನಮ್ಮ ರಾಜ್ಯದ ಭೌತಿಕ ಸಂಪನ್ಮೂಲ, ಭೌತಿಕ ಶಕ್ತಿ, ಇವತ್ತು ಪಲಾಯನವಾಗುತ್ತಿದೆ, ಅದು ನಮ್ಮ ರಾಜ್ಯಕ್ಕೆ ಉಪಯೋಗವಾಗುತ್ತಿಲ್ಲ. ಇವತ್ತು ಅಮೇರಿಕಾದ ಮಲ್ಟಿ ನ್ಯಾಷನಲ್ ಕಾರ್ಪೋರೇಷನ್‌ನವರು, ಯೂರೋಪಿನ ಮಲ್ಟಿ ನ್ಯಾಷನಲ್ ಕಾರ್ಪೋರೇಷನ್ಸ್, ಇವರೆಲ್ಲಾ ನಮ್ಮ ಮಾನವ ಸಂಪನ್ಮೂಲವನ್ನು ದೋಚಿಕೊಂಡು ಹೋಗುತ್ತಿದ್ದಾರೆ. ನಮ್ಮ ಭೌತಿಕ ಶಕ್ತಿಯನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇವತ್ತು ನಮ್ಮ ದೇಶದಲ್ಲಿ ಡಾಕ್ಟರ್‌ಗಳು ಇಲ್ಲವೆಂದು ನಾವು ಹೇಳುತ್ತೇವೆ. ಇದಕ್ಕೆ ನಾನು ಒಂದೇ ಒಂದು ಲೆಕ್ಕವನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಇವತ್ತು ಪ್ರತಿ ವರ್ಷ 12,400 ಜನರನ್ನು ಡಾಕ್ಟರ್‌ಗಳಾಗಿ ಉತ್ಪಾದನೆ ಮಾಡುತ್ತಿದ್ದೇವೆ. ಒಬ್ಬ ಡಾಕ್ಟರ್ ಅನ್ನು ಉತ್ಪಾದನೆ ಮಾಡಬೇಕಾದರೆ, ಕರ್ನಾಟಕ ರಾಜ್ಯ ಸರ್ಕಾರ ಸರ್ಕಾರದಿಂದ 2,90,000 ರೂಪಾಯಿಗಳನ್ನು ಸರಾಸರಿ ಒಬ್ಬ ವಿದ್ಯಾರ್ಥಿಗೆ ಖರ್ಚು ಮಾಡಬೇಕಾಗುತ್ತದೆ. ಒಂದು ವರ್ಷಕ್ಕೆ ಇಷ್ಟು ಹಣವೆಂದರೆ 5 ವರ್ಷಕ್ಕೆ ಹತ್ತಿರ ಹತ್ತಿರ 15 ಲಕ್ಷ ರೂಪಾಯಿಗಳನ್ನು ಸರ್ಕಾರ ಹಣವನ್ನು ಖರ್ಚು ಮಾಡಿ, ಒಬ್ಬ ಡಾಕ್ಟರ್ ಅನ್ನು ಉತ್ಪಾದನೆ ಮಾಡಿದರೆ, ನಮ್ಮ ಹಳ್ಳಿಯಲ್ಲಿ ಡಾಕ್ಟರ್ ಇಲ್ಲ. ಅವನು ಅಮೇರಿಕಾಕಕ್ಕೆ ಹೋಗುತ್ತಾನೆ. ಇವನು ಏಕೆ ಓಡಿ ಹೋಗುತ್ತಾನೆಂದರೆ, ಅವನಿಗೆ ಇಲ್ಲಿ ಅವಕಾಶ ಇಲ್ಲ. ನನ್ನ ಹತ್ತಿರ ಡಾಕ್ಟರ್‌ಗಳು ಹೇಳಿದ್ದಾರೆ. ಹಳ್ಳಿಗೆ ಡಾಕ್ಟರ್‌ಗಳು ಏಕೆ ಬರುವುದಿಲ್ಲವೆಂದರೆ, ಅವರು ನೇರವಾಗಿ ಮಾತನಾಡುತ್ತಾರೆ. ಅವರ ಪ್ರಾಮಾಣಿಕತೆಗೆ ನಾನು ಒಪ್ಪುತ್ತೇನೆ. ಅವರು ಏನು ಹೇಳುತ್ತಾರೆಂದರೆ, "ನೋಡಿ ಸಾರ್, ನಾವು ಒಬ್ಬ ಡಾಕ್ಟರ್ ಆಗಬೇಕಾದರೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ನೀವು ಎಲ್ಲೋ ಹಳ್ಳಿಗೆ ಹೋಗಿ, ನನಗೆ 10,000, 15,000 ರೂಪಾಯಿಗಳ ಸಂಬಳವನ್ನು ಕೊಟ್ಟು, ಎಲ್ಲೋ ಹಳ್ಳಿಗೆ ಹಾಕಿದರೆ, ನಾನು ಒಂದು ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡುವುದು ಹೇಗೆ"? ಎಂದು ನೇರವಾಗಿ ಕೇಳುತ್ತಾರೆ. ಈ ರೀತಿ ಅವರು ನೇರವಾಗಿ ಪ್ರಶ್ನೆ ಮಾಡುತ್ತಾರೆ. ನಾನು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಡಾಕ್ಟರ್ ಓದಬೇಕಾಗುತ್ತದೆ. ನೀವು 10,000 ರೂಪಾಯಿಗಳನ್ನು ಕೊಟ್ಟರೆ, ನಾನು ಒಂದು ಕೋಟಿ ರೂಪಾಯಿಗಳನ್ನು ಎಲ್ಲಿಂದ ತರುವುದು? ನಾನು ಹೇಗೆ ಹಳ್ಳಿಗೆ ಹೋಗಲಿ, ಎಂದು ನೇರವಾಗಿ ಪ್ರಶ್ನೆಯನ್ನು ಹಾಕುತ್ತಾರೆ. ಇವತ್ತು ಇದಕ್ಕೆ ನಮ್ಮಲ್ಲಿ ಏನು ಉತ್ತರ ಇದೆ? ಅದಕ್ಕೆ ಅವನು ಅಮೇಕಾಕ್ಕೆ ಓಡಿಹೋಗುತ್ತಾರೆ, ಇಲ್ಲವೆಂದರೆ ಇಂಗ್ಲೆಂಡ್‌ಗೆ ಓಡಿ ಹೋಗುತ್ತಾರೆ. ನಮ್ಮ ಹಳ್ಳಿಗಳಲ್ಲಿ ಡಾಕ್ಟರ್‌ಗಳು ಇಲ್ಲ ನಮ್ಮ ಹಳ್ಳಿಯ ಜನರಿಗೆ ಡಾಕ್ಟರ್‌ಗಳು ಇಲ್ಲ. ನಮ್ಮ ಪಟ್ಟಣದ ಜನರಿಗೂ ಡಾಕ್ಟರ್‌ಗಳು ಇಲ್ಲ. ವಿಕ್ಟೋರಿಯಾ ಆಸ್ಪತ್ರೆಯು ನಶಿಸಿ ಹೋಗುತ್ತಿದೆ, ಮಲ್ಯ ಆಸ್ಪತ್ರೆ ಈ ರಾಜ್ಯದಲ್ಲಿ

ಬೆಳೆಯುತ್ತಿದೆ. ವಿಕ್ಟೋರಿಯಾ ಆಸ್ಪತ್ರೆಗೆ ಡಾಕ್ಟರ್‌ಗಳು ಇಲ್ಲ, ಔಷಧಿಗಳು ಇಲ್ಲ; ಮೂಗು ಮುಚ್ಚಿಕೊಂಡು ಹೋಗಬೇಕು. ಮಲ್ಯ ಆಸ್ಪತ್ರೆ, ಅಪೋಲೋ ಆಸ್ಪತ್ರೆ, ಸಾಗರ್ ಅಪೋಲೋ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳೆಲ್ಲಾ ಇವತ್ತು ಬೆಂಗಳೂರಿನಲ್ಲಿ ವಿಜೃಂಭಿಸುತ್ತಿವೆ. ನಾವು ಈ ಬಗ್ಗೆ ಪ್ರಾಮಾಣಿಕವಾಗಿ ಆಲೋಚನೆಯನ್ನು ಮಾಡೋಣ. ಅಪೋಲೊ, ಮಲ್ಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆಲ್ಲಾ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುವಂತಹ ಶಕ್ತಿ ಎಷ್ಟು ಪರ್ಸೆಂಟ್ ಜನರಿಗೆ ಈ ಕರ್ನಾಟಕ ರಾಜ್ಯದಲ್ಲಿ ಇದೆ? ಎಷ್ಟು ಪರ್ಸೆಂಟ್ not even 5% ಶೇ.95ರಷ್ಟು ಜನರಿಗೆ ಇವತ್ತು ಔಷಧಿಗಳು ಇಲ್ಲದೇ ಇರುವಂತಹ ಆಸ್ಪತ್ರೆಗಳನ್ನು ನೋಡಿದ್ದೇವೆ. ವಿಕ್ಟೋರಿಯಾ ಆಸ್ಪತ್ರೆ ಇದಕ್ಕೆ ಜೀವಂತ ಸಾಕ್ಷಿಯಾಗಿದೆ. ತಾವು ಹೋಗಿ ನೋಡಿ, ಅಲ್ಲಿ ಏನು ಇದೆ? ಅಲ್ಲಿ ಏನೂ ಇಲ್ಲ. ಹಾಗಾದರೆ ನಾವು ಯಾರ ಪರವಾಗಿ ಕೆಲಸವನ್ನು ಮಾಡುತ್ತಿದ್ದೇವೆ. ನಾವು ಅಪೋಲೋ ಆಸ್ಪತ್ರೆಯ ಪರವಾಗಿ ಕೆಲಸವನ್ನು ಮಾಡುತ್ತಿದೇವೆಯೋ ಅಥವಾ ವಿಕ್ಟೋರಿಯಾ ಅಸ್ಪತ್ರೆಯ ಪರವಾಗಿ ಕೆಲಸ ಮಾಡುತ್ತಿದ್ದೇವೆಯೋ? ನಾವು ಯಾರಿಗೆ ವೈದ್ಯಕೀಯ ಸೌಲಭ್ಯಗಳನ್ನು ಕೊಡುತ್ತಿದ್ದೇವೆ? ಡಾಕ್ಟರ್‌ಗಳು ಈ ದೇಶವನ್ನು ಬಿಟ್ಟು ಹೋಗುತ್ತಾರೆ. ಇಂಜಿನಿಯರ್‌ಗಳು ಈ ದೇಶವನ್ನು ಬಿಟ್ಟು ಹೋಗುತ್ತಾರೆ. ನಮ್ಮ ರಾಜ್ಯದ ಹಣ, ನಮ್ಮ ಬಡವರ ಹಣ, ಅವರು ಬೆವರು ಸುರಿಸಿ ಉತ್ಪಾದನೆ ಮಾಡಿದಂತಹ ಹಣದಲ್ಲಿ ಅವರು ಡಾಕ್ಟರ್‌ಗಳು, ಇಂಜಿನಿಯರ್‌ಗಳು ಆಗಿ, ಅವರು ಅಮೇರಿಕಾಕ್ಕೆ ಹೋಗುತ್ತಾರೆ. ಆದರೆ ಇಲ್ಲಿ ಈ ಬಡವ ಮಾತ್ರ ಔಷಧಿ ಇಲ್ಲದೇ ಇವತ್ತು ಸಾಯುತ್ತಿದ್ದಾನೆ. ಮೊನ್ನೆ ಒಬ್ಬ ಹೃದಯ ತಜ್ಞರು ನನಗೆ ಹೇಳಿದರು. ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ಹೃದಯ ರೋಗಿಗಳಿಗೆ, ಆಸ್ಪತ್ರೆಗಳನ್ನು ನಾವು ಸರಿಯಾಗಿ ಒದಗಿಸಬೇಕಾದರೆ, ಶೇ.48ರಷ್ಟು ಆಸ್ಪತ್ರೆಗಳು ಹೆಚ್ಚಾಗಬೇಕು ಎಂದು ನಮ್ಮಲ್ಲಿ ಆಸ್ಪತ್ರೆಗಳು ಎಷ್ಟು ಇವೆ? ಇವತ್ತು ಜಯದೇವ ಹೃದ್ರೋಗದ ಆಸ್ಪತ್ರೆಯ ಬೋರ್ಡ್ ಅನ್ನು ತೋರಿಸಿ ಇದು ಕರ್ನಾಟಕದ್ದು, ಸರ್ಕಾರದ್ದು ಒಂದು ಇದೆಯೆಂದು ತೋರಿಸುತ್ತೇವೆ. ಜಯದೇವ ಆಸ್ಪತ್ರೆಯಲ್ಲೂ ಸಹ ಒಬ್ಬ ರೋಗಿಗೆ ಎಷ್ಟು ಹಣ ಖರ್ಚಾಗುತ್ತದೆ ಗೊತ್ತಾ? ಕನಿಷ್ಟ ಅದನ್ನು ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆ? ಯಾವ ಭಾಗದ ಜನರಿಗೆ ಶಕ್ತಿ ಇದೆ? ನಾವು ಬಹಳ ಮಾತನಾಡುತ್ತಿದ್ದೇವೆ. ನಾವು ಬಡವರ ಬಗ್ಗೆ, ದಲಿತರ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ಬಹಳ ಮಾತನಾಡುತ್ತೇವೆ. ಒಂದು ಲಕ್ಷ, ಎರಡು ಲಕ್ಷ, ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಬೈಪಾಸ್ ಸರ್ಜರಿಯನ್ನು ಮಾಡಿಸಿಕೊಳ್ಳುವಂತಹ ಶಕ್ತಿ ಎಷ್ಟು ಪರ್ಸೆಂಟ್ ಜನರಿಗೆ ಕೊಟ್ಟಿದ್ದೇವೆ? ನಾವು ಯಾರಿಗೆ ಆರೋಗ್ಯವನ್ನು ಕೊಡುತ್ತಿದ್ದೇವೆ? ನೀವು ಏನು ಹೇಳುತ್ತೀರಿ? ಸ್ಪರ್ಧೆ ಮಾಡಿ ಎಂದು ಹೌದು, ಸ್ಪರ್ಧೆ ಮಾಡಬೇಕು. ನನಗೆ ಎರಡು ಹೊತ್ತಿಗೆ ಊಟ ಇಲ್ಲ ಆದರೆ ಮೂರು ಕೆ.ಜಿ. ಮಾಂಸವನ್ನು ತಿನ್ನುವವನ ಮೇಲೆ ಕುಸ್ತಿಗೆ ಹೋಗು ಎಂದು ನೀವು ಹೇಳುತ್ತೀರಾ? ಸ್ಪರ್ಧೆ ಈ ರೀತಿಯಾದಂತಹ ಅವ್ಯವಸ್ಥೆಯನ್ನು ಸೃಷ್ಟಿ ಮಾಡಿರುವಂತಹ ನಾವು ಈ ರಾಜ್ಯದಲ್ಲಿ ಆರ್ಥಿಕ ಬೆಳವಣಿಗೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ಆಲೋಚನೆಯನ್ನು ಮಾಡಬೇಕು. ಕೊನೆಯದಾಗಿ ನಾನು ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ. ಇದು ಹೆಚ್ಚು ದಿವಸ ಈ ರೀತಿ ನಡೆಯುವುದಿಲ್ಲ, ಜನರು ಎಚ್ಚೆತ್ತುಕೊಳ್ಳುತ್ತಾರೆ. ಈ ಸರ್ಕಾರಗಳ ಈ ರಾಜಕೀಯ ಪಕ್ಷಗಳ ಮುಖವಾಡಗಳನ್ನೆಲ್ಲಾ ಒಂದು ದಿವಸ ಕಳಚುತ್ತಾರೆ.

"ಇಂದು ನೆತ್ತರ ಚೆಲ್ಲಿ,
ಮುಂದೆ ಬಹು ಮಕ್ಕಳಿಗೆ,
ಹೊಟ್ಟೆಗೆ ಅನ್ನವ, ಮೈಗೆ ಬಟ್ಟೆಯ ನೀಡುವ
ಇಂದು ರಕ್ತದ ಬಿಂದು, ಮುಂದೆ ಸೌಖ್ಯದ ಸಿಂಧು"

ಇದು ಹೆಚ್ಚು ದಿವಸ ನಡೆಯುವುದಿಲ್ಲ. ಆದುದರಿಂದ ಈಗಲಾದರೂ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಜನಪರವಾದಂತಹ ಬಜೆಟ್ ಎಂದರೆ ವಿಕ್ಟೋರಿಯಾ ಆಸ್ಪತ್ರೆಗೆ ಹೋಗುವಂತಹ ಪೇಷೆಂಟ್ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ, ಅಪೋಲೋ ಆಸ್ಪತ್ರೆಗೆ ಹೋಗುವಂತಹ ಪೇಷೆಂಟ್ ಬಗ್ಗೆ ಅಲ್ಲ ನಾವು ಆಲೋಚನೆ ಮಾಡುವುದು. ಆದುದರಿಂದ ಈ ಬಜೆಟ್‌ನಲ್ಲಿ ಗೊತ್ತು, ಗುರಿ ಇಲ್ಲ. ಕಡೆಯದಾಗಿ ನಾನು ಹೇಳುವುಷದೇನೆಂದರೆ ಕರ್ನಾಟಕ ರಾಜ್ಯದ ಅಭಿವೃದ್ಧಿ ರಂಗದ ಹೆಸರಿನಲ್ಲಿ ಮಂಡಿಸಿರುವಂತಹ ಈ ಬಜೆಟ್, ಅಭಿವೃದ್ಧಿನೂ ಇಲ್ಲ, ಅಭಿವೃದ್ಧಿಯ ಪರವಾಗಿಯೂ ಇಲ್ಲ, ಅಭಿವೃದ್ಧಿಗೆ ಪೂರಕವಾಗಿಯೂ ಇಲ್ಲ, ಇದು ಅಭಿವೃದ್ಧಿ ನಿರೋಧಕವಾದಂತಹ ಬಜೆಟ್, ಇದನ್ನು ಕರ್ನಾಟಕ ಅಭಿವೃದ್ಧಿ ರಂಗ ಮಂಡಿಸಿದೆಯೆಂದು ಹೇಳಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ.

12. ಪ್ರಕಟಣೆ

ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳ ಮಾನ್ಯ ಶಾಸಕರಿಗಾಗಿ ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಅಂತರರಾಷ್ಟ್ರೀಯ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸಂಸ್ಥಾಪಕರಾದ ಗೌರವಾನ್ವಿತ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರಿಂದ ಬ್ಯಾಂಕ್ವೆಟ್ ಹಾಲ್ ವಿಧಾನ ಸೌಧ, ಬೆಂಗಳೂರುನಲ್ಲಿ ಇವತ್ತು ಸಂಜೆ 6.30 ಗಂಟೆಗೆ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ಇದು ಏನು ಸರ್ಕಾರದ ಕಾರ್ಯಕ್ರಮವೊ, ಏನು ಕಾರ್ಯಕ್ರಮವೆಂಬುದು ನನಗೆ ಅರ್ಥವಾಗಲಿಲ್ಲ. ಈ ಕಾರ್ಯಕ್ರಮ ಇರಲಿ ಸಂತೋಷ.

ಉಪಾಧ್ಯಕ್ಷರು: ಇದಕ್ಕೆ ಇಷ್ಟ ಇರುವವರು ಹೋಗಬಹುದು, ಇದು ಸರ್ಕಾರಿ ಕಾರ್ಯಕ್ರಮ.

ಶ್ರೀ ವಾಟಾಳ್ ನಾಗರಾಜ್: ತಾವು ಮಾಡಿ, ಅನೇಕ ಮಠಾಧಿಪತಿಗಳು ನಾಳೆ ದಿವಸ ಬಂದು ಇಲ್ಲಿ ಭಾಷಣ ಮಾಡಲು ಎಂದು ಕೇಳಿದರೆ ಅದಕ್ಕೆ ಅವಕಾಶವನ್ನು ಕೊಡುತ್ತೀರಾ? ಅವರಿಂದ ಭಾಷಣವನ್ನು ಮಾಡಿಸುತ್ತೀರಾ? ನಾವು ಎಲ್ಲಾ ಶಾಸಕರು ಇದನ್ನು ಕುಳಿತುಕೊಂಡು ಕೇಳಬೇಕೆ? ಏನು ಉದ್ದೇಶ? ಯಾರು ಇದನ್ನು ಮಾಡತಕ್ಕಂಥವರು, ಯಾವ ಉದ್ದೇಶಕ್ಕಾಗಿ ಮಾಡುತ್ತಿದ್ದಾರೆಂಬುದರ ಬಗ್ಗೆ ಸರ್ಕಾರ ಹೇಳಬೇಕು ನಾವು ಯಾರ ಬಗ್ಗೆನೂ ಅಗೌರವನ್ನು ತೋರಿಸುತ್ತಿಲ್ಲ.

ಶ್ರೀ ಜಿ.ಟಿ. ದೇವೇಗೌಡ: ಶಾಸಕರಿಗೆಲ್ಲಾ ಆರೋಗ್ಯ ಚೆನ್ನಾಗಿ ಇರಲಿ ಎಂದು . .